ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ, ೧೫ನೇ ಮಾರ್ಚ್ ೧೯೯೦/೨೪ ಫಾಲ್ಗುಣ, ೧೯೧೧ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನಲಂಕರಿಸಿದ್ದರು.

ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು (ಹಂಗಾಮಿ) ಮಾಡಿದ ಭಾಷಣದ ಅಧಿಕೃತ ವರದಿ.

ಸನ್ಮಾನ್ಯ ರಾಜ್ಯಪಾಲರಾದ (ಹಂಗಾಮಿ) ಶ್ರೀ ಎಸ್.ಎಸ್. ಮೋಹನ್ ಅವರು, ಬೆಳಿಗ್ಗೆ ೧೧.೦೦ ಗಂಟೆಗೆ ವಿಧಾನ ಸೌಧದಲ್ಲಿರುವ ವಿಧಾನ ಸಭಾ ಸದನದಲ್ಲಿ ಸಮಾವೇಶಗೊಂಡ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣ.

ಮಾನ್ಯ ರಾಜ್ಯಪಾಲರು ಬೆಳಿಗ್ಗೆ ೧೦.೫೫ ಗಂಟೆಗೆ ಸರಿಯಾಗಿ ವಿಧಾನ ಸೌಧದ ಮುಖ್ಯ ದ್ವಾರದ ಬಳಿ ಇರುವ ದ್ವಾರ ಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಅಧ್ಯಕ್ಷರವರು ಮಾನ್ಯ ಸಭಾಪತಿಯವರು ಮತ್ತು ವಿಧಾನ ಮಂಡಲದ ಮಾನ್ಯ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವಭಾಗದ ಲಿಫ್ಟ್‌ಗೆ ರಾಜ್ಯಪಾಲರನ್ನು ಕರೆದೊಯ್ಯಲಾಯಿತು. ಮೊದಲನೆಯ ಮಹಡಿಯಲ್ಲಿ ಲಿಫ್ಟ್‌ನಿಂದ ಹೊರಗೆ ಬಂದ ಬಳಿಕ. ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು

ಮಾನ್ಯ ಅಧ್ಯಕ್ಷರು ಮಾನ್ಯ ಸಭಾಪತಿಯವರು

ರಾಜ್ಯಪಾಲರು

ಎ.ಡಿ.ಸಿ.

ಈ ರೀತಿ ಮೆರವಣಿಗೆಯು ವಿಧಾನಸಭೆಯ ಸಭಾಂಗಣದ ಕಡೆಗೆ ಹೊರಟಿತು. ಸಭಾಂಗಣದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ, ಮಾನ್ಯ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು.

ಮೇಲಿನ ಕ್ರಮದಲ್ಲಿ ಮೆರವಣಿಗೆಯು ಸಭಾಂಗಣದ ವೇದಿಕೆಯ ಮುಂಭಾಗಕ್ಕೆ ಬಂದ ಬಳಿಕ ಇಬ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರವರು ಮಾನ್ಯ ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡ ಭಾಗದಲ್ಲಿಯೂ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯದಲ್ಲಿರುವ ಆಸನದಲ್ಲಿ ಕುಳಿತುಕೊಂಡರು ಮತ್ತು ಕಾರ್ಯದರ್ಶಿಯವರು ವೇದಿಕೆಯ ಮುಂಭಾಗದಲ್ಲಿರುವ ತಮ್ಮ ಆಸನದಲ್ಲಿ ಕುಳಿತುಕೊಂಡರು.

H. E. The Governor :—

MR. CHAIRMAN, MR. SPEAKER AND HON'BLE MEMBERS,

It is with pleasure that I welcome you to the Joint Session of the State Legislature. As this is the first Session of the Legislature during the current year I offer to you and through you to the people of Karnataka my good wishes for the New Year. (At this stage Sri Vatal Nagaraj M.L.A. Stood up and requested his Excellency to Speak in Kannada) I cons der myself fortunate to be here today in your midst. To address this august body with its long tradition of parliamentary democracy is a privilege which I shall always cherish. To me it is a matter of pride to be of service to the generous and peace loving people of Karnataka.

2. Hon'ble Members, you are aware of the tragic air disaster that took place near the Bangalore Airport last month. While our hearts go out in sympathy to the members of the bereaved families and those who suffered pain and injury, we must also compliment the selfless service rendered by the personnel of the various hospitals, the Fire Force, Home Guards, Police and the Bangalore City Corporation. While I pray God that such a tragedy never occurs again, a self evaluation has been done to ensure even greater preparedness to meet such unfortunate eventualities in the future.

3. It is unfortunate that at periodic intervals and with repeated regularity our friends from across the border raise the so called 'Border Dispute'. My Government wishes to make it emphatically clear that there is no dispute whatsoever. The Mahajan Commission Report is final and binding and I urge the Government of India to implement this report in it's totality.

4. Karnataka has always maintained good neighbourly relations. It is in this spirit that my Government makes the offer of sharing of the Cauvery and Krishna Waters according to mutually agreeable principles and the benefit of all our peoples.

5. Our country is today passing through a grave crisis with disturbances in sentisive areas. At a time like this, it should be the endeavour of every patriotic Indian not only to safeguard the integrity and unity of our country but also to contribute positively to that process.

6. Hon'ble Members will be happy to know that the Staff Selection Commission of the Government of India has opened a Sub Regional Office at Bangalore for which free accommodation has been provided. With the opening of the Sub Regional Office, it is hoped that Kannadigas who are under represented will find employment opportunitles at subordinate levels in the Government of India.

7. Very recently, we witnessed the sorry spectacle of Government officers and officials striking work. While Government servants may have genuine grievances, such grievances can be redressed only within the totality of the development strategy and the funds available for the entire State. My Government is prepared to consider the genuine grievances of its employees. It is my Government's firm belief that the harmonious relationship that always existed with it's employees will continue to develop inspite of the recent unpleasant incidents.

8. One of the foremost tasks my Government has set for itslef is improving efficiency in administration and injecting service discipline into the administrative system. While administrative efficiency is at a low ebb the vastly expanded bureaucracy has not been adequately responsive to the needs and the aspirations of the people. Corruption has become widespread. Complicated procedures and rules contribute in large measure to avoidable delays. In order to curb these problems, my Government will be initiating action on three fronts. Firstly a Bureau of Efficiency Audit and Vigilance is being set up in order to ensure efficient discharge of Government functions in different spheres of administration and will be charged with the responsibility of looking into cases of corruption, negligence, dereliction of duty, inefficiency and wasteful expenditure and accountability. Secondly, a Systems Research Organisation comprising of experienced civil servants and reputed management experts will be set up to redesign procedures, reorient systems and man power planning with the objective of making administration efficient, responsible, responsive and courteous. And thirdly, a Screening Committee headed by a retired High Court Judge is being constituted to review the performance of officers at all levels including the higher echelons. This review will enable Government to decide on the continuance of such officers in Government service.

9. Ever since the assumption of office by my Government, law and order has been effectively maintained in the State except for a few stray instances. My Government will continue to strive hard to maintain peaceful conditions.

10. It is necessary that the law and order enforcement machinery functions in a more cohesive and efficient manner. With this in mind, several measures are being taken up by Government to modernise and strengthen the Police Force. A programme has been drawn up for setting up in a phased manner new Police Stations particularly in new Industrial Townships and growing residential colonies. Special emphasis would also be given to increase the mobility and communication network of the police Force.

11. In the past few months, there has been some increase in the incidents of dacoities specially in the outlying areas near Bangalore and other urban areas. My Government has initiated and will continue to introduce several measures to take care of this menace. A special anti-dacoity cell has been set up. Police vigilance has been intensified specially by introducing night patrols. Adequate support in the form of vehicles arms and ammunitions and communication is being provided.

12. A number of representations are being received that the age of superannuation of Government servants should be reduced from the present 58 years to 55 years. These requests are specially from the large number of educated unemployed youth. My Government would like to carefully deliberate the question in all its aspects.

13. The sale and consumption of toddy has been banned in seven districts of the State. However inspite of strict vigilance and control over the purity of toddy, there are innumerable complaints of adulterated and spurious toddy being passed on by unscrupulous elements to the unsuspecting public. In order therefore to safeguard the health of the people, my Government has decided to ban the sale and consumption of toddy throught out the State with effect from the beginning of the Excise Year 1990-91. my Government has taken this conscious decision keeping in mind the welfare of the people although such a measure is bound to result in considerable loss of revenue.

14. Hon'ble Members will be happy to know that my Government has taken a conscious decision in principle to regularise unauthorised occupation of Government lands. Needless to say preference in the regularisation of such unauthorised Government lands would be given to persons belonging to the Scheduled Caste and Scheduled Tribe and to landless agricultural laboures and marginal farmers. In the area of Land Reforms, substantial work has been done and the work of tribunals is almost complete. It is proposed to complete the balance work at the earlist. Certain amendments to the Karnataka Land Reforms Act are under the consideration of Government.

15. Urban Housing is an area in which my Government has drawn up a detailed programme for the construction of houses for slum dwellers in the coming year. The Nehru Rozgar Yojana a whose objective is creation of fresh employment opportunites for urban unemployed and under emloyed poor will be implemented in all seriousness during the coming year. This would involve setting up tiny enterpeises in urban areas, construction of tenements for the urban poor and generation of urban wage employment.

16. It is a matter of great concern to my Government that there has been a steady decline in investments in Industries in the State for the past few years. My Government proposes to arrest this negative trend by providing the required thrust for Industrial Development. Every effort would be made to provide better infrastructural facilities and attractive package of incentives and concessions. While special emphasis would be laid on the growth of the small scale and tiny sector, every encouragement would be given to the large and medium scale sectors also.

17. A Special Cell has been set up to undertake a study of sick textile and sugar units in the State. It is expected that this study would enable appropriate revival and rehabilitation measures being taken.

18. Karnataka now has 62 Public Sector Undertakings with a large investment. Unfortunately only a few of them have been earning profits after tax. time has there fore come to assess the relevance of each of these enterprise in the light of today's environment and compulsions. It would not be correct to divert precous resources of the State to help run Public Sector Undertakings which are chronically sick. My Government there ore proposes to consider all available alternatives towards making them viable.

19. This year under Phase-II of the Karnataka Sericulture Project-II, an additional 15,000 hectars are proposed to be brought under Mulberry coltivation. This project will certainly generate additional employment both direct and indirect. Silk production is expected to inerease by 24 percent. The thrust in the area of sericulture development wiil be to ensure sustained and tow cost public sector development making the maximum use of private sector initiative.

20. While my Government attaches great importance to the Power Sector, it is this sector which is causing anxiety. Although additional capacity has been created on the hydel front, poor monsoons have resulted in major reseruoirs not getting filled up to expectations. Consequently there is a gap between requirement and availablity. It is therefore necessary to argument power generation capacity on a warfooting. Work on several projects is proceeding on schedule. It is a matter of pride that all inhabitated villages in Karnataka have been electrified. The emphasis this year would be on electrication of hamlets, Scheduled Cast and Scheduled Tribe Colonies, tribal colonies and tands and energising irigation pump sets.

21. Apart from power, irrigtion is another critical sector on hich my Government will lay special emphasis. It is proposed to reate an irrigation potential of 35,171 hectares under major and

medium irrigation projects and 9,913 hectares under minor irrigation projects. Ground water is proposed to be tapped to create a p tential of 40,000 hectares. My Government will make every effort to see that Phase–II of Stage–I of the Upper Krishn Project is completed on schedu'e. Karnataka has a number of tanks and very old river channels, some of them d.ting back to the Vijayanagar Empire. A pilot scheme has been worked out to renovate these river channels and desilt the tanks so as to facilitate a comprehensive programme being taken up during the VIII Plan. Antisea erosion and flood control works will receive greater attention. Construction of breakwaters in the old Mangalore Port is proposed to be taken up during the coming year.

22. The State Remote Sensing Centre will be further strengthened during the coming year by equiping it with facilities for advanced visual interpretation, cartography and documentation. The Centre will, this year, take up remote sensing projects in collaboration with other departments of Government like Irrigation, Fisheries and Housing and Urban Development. This year onwards the Special Drought Monitoring Cell will publish region specific drought indices on a regular basis. All these measures will enable the development of short term and long term packages for managing drought.

23. By and large, the industrial scene in Karnataka has been peaceful save for a few incidents. Special schemes will be continued for training in the Industrial Training Institutes in the State with exclusive training being given to Scheduled caste and Scheduled Tribe candidates. Three Industrial Technical Training Institutes at Madikeri, Raichur and Hubli now have an exclusive section for Women.

24. My Government is deeply committed to the cause of educational and social advancement of Scheduled Castes and Scheduled Tribes, Backward Classes and Minorities. Students of these categories will now get an enhanced scholarship. Boarding charges will also be revised. My Government has ensured that rank holders among the Scheduled Castes and Scheduled Tribes will obtain direct employment in Government. Orders in this regard have been issued. The implementation of the Special Component Plan and the Tribal Sub Plan will be closely monitored to ensure that their benefits effectively reach the intended beneficiaries.

25. My Government expects to receive the report of the III Backward Classes Commission by the middle of April 1990. Imme diately on receipt of the report, the recommendations will be examined and appropriate action will be initiated.

26. Health and Family Welfare Services have the objective of achieving 'Health for all' by 2000 A.D. With this in mind, during the coming year, Primary Health Units will be upgraded to

Community Health Centres. 50 Primary Health Centres will be established and addtional inputs provided in some of the Primary Health Centres. Today the overwhelming majority of child births in rural areas take place at home, often amidst unhygenic and insanitary conditions due to lack of maternity facilities. My Government therefore will start an ambitious programme of building 100 Maternity cum-Welfare Wards every year, attached to Primary Health Centres and Primary Health Units In order to encourage peoples participation in the creation of these important facilities, maternity wards would be sanctioned to such of those Primary Health Centres and Primary Health Units for which the Mandal Panchayats are able to allocate funds or for which the local people are able to contribute.

27. The persistent efforts of my Government have yielded results and the Government of India have increased allocations of rice to the State for public distribution. However, even with increased allocations from the Government of India, the monthly requirement of 75,000 M. tons to meet the minimum needs of the consumers is not available. My Government would continue its efforts to obtain additional allocations to the State. While Fair Price Shops will be streamlined and additional Fair Price Shops opened, a thorough survey of Green Cards issued under the Subsidised Food Grains Scheme will be undertaken to eliminate ineligible beneficiaries and to cover eligible beneficiaries who have been left out. My Government will shortly establish Consumers Protection Board in each of the Districts of the State. These will provide a remedy to consumers at the District Level itself.

28. It is proposed to computerise in a phased manner all activities of the Transport Department. Hon'ble Members will be happy to know that it was for the first time in India on 1st Jan. 1990 that the Learner's License Test was computerised in one of the Regional Transport Offices in Bangalore City. Transport Adalats have also been introduced to indentify constraints in the working of the department. For the first time, a transport demand survey was initiated and the demand pattern for various transport services from the State to Village Level was studied. The results of this survey will enable Government to decide its policy responses in the year to come.

29. The First Stage of the Malpe Fishing Harbour has since been completed. The Second Stage will now be taken up after obtaining approval from the Government of India. The Indo Danish Integrated Fisheries Project taken up at Tadri in Karwar District is expected to be completed by October of this year. The Second Stage of this project is awaiting clearance from the Government of India. All local bodies in the State have been requested to provide proper facilities for marketing of fish. While

emphasis is laid on pisiculture. fishermen also will receive special attention of my Government. Under the National Welfare Scheme, houses will be constructed for Fishermen below the poverty line. Special speed boats for intensive patrolling are to be acquired to effectively implement the Marine Fishing Regulation Act.

30 The World Bank-ODA assisted Social Forestry Project is being continued for one more year. The main project of the Integrated Development of Forests in the Western Ghats has been drawn up to be implemented over a period of five years. It is my earnest hope that the Government of India will obtain external assistance for this project from the Overseas Development Administration of Great Britain which has evinced interest in the same.

31. A massive project for the development of Sheep and Sheep Products has been drawn up and my Government expects t implement it with external assistance. Poultry farmers in Karnataka have of late been finding it difficult to market their products. To help both the Poultry Farmers and the consumers of Poultry Products, my Government is actively considering seting up of a Poultry Marketing Corporation.

32. This year it has not been possible to achieve the target set for food production and also targets under oil seeds, cereals and pulses. This was due in large measure to the erratic monsoons. The Water Shed Development Programme under the Dry Land Development Boards and Oil Seeds Corporation will be continued during the coming year. In the area of Agriculture Development, emphasis will continue to be placed on distribution of input kits to small and marginal farmers under the special programmes for the weaker sections. To meet the shortage of Oil Seeds Production. a pilot project for oil Palm Cultivation has been started in the Bhadra Command Area. On the basis of the results of this project, it is proposed to bring in areas under Oil Palm Cultivation in the Command Areas of the Tunga Bhadra Project and Cauvery Basin Projects. Karnataka has very good potential for horticulture and consequently every effort will be made to bring new areas under horticulture and also to introduce new horticultural species.

33. To ensure remunerative returns for Agriculturists, my Government will strive its best to take all necessary steps. Needless to say my Government will always have the best interests of the farmers of the State in mind and will provide them with all possible assistance.

34. Hon'ble Members are aware that Karnataka has tremendous tourist potential. 1990-91 is being celebrated as 'Visit India' year. To prepare for this, every effort will be made to improve infrastructural facilities for tourists. A comprehensive Tourist Development Project has been prepared My Government expects to implement this project with external assistance from the

OECF. This project, the implementation of which will commence during the next financial year will give Karnataka its pride of place on the Tourist Map.

35. Hon'ble Members, you will be happy to know that Karnataka is one of the eight States identified by the Government of India for the implementation of a scheme to strengthen technical education with World Bank Assistance. Technical Education is proposed to be upgraded under three different components namely, capacity expansion, quality improvement and efficiency improvement. Consequently from this year onwards. there will be a marked improvement in technical education in terms of new courses, continuing education programme, special programmes for women and the physically handicapped, modernisation of laboratories and equipment.

36. The facilities provided for education in rural areas are woefully inadequate. My Government will therefore give highest priority for improving facilities in Primary and Secondary Schools. The thrust in this area will be on repairs to existing Primary and Secondary School Buildings, construction of new School buildings and providing necessary teaching equipment and aids to Schools. Appointment of Primary and Secondary School Teachers will be done with utmost urgency.

37. Hon'ble Members will be happy to know that my Government has formulated projects for augmenting water supply to 27 towns and cities in the State with institutional financial assistance. Similar projects will be formulated during the current year in the remaining towns and cities which are deficient in water supply. Over the past few years, a programme of constructing sanitary latrines in Villages is being implemented. This programme however has not resulted in any perceivable improvement. My Government therefore is introducing a new programme called 'Nirmala Grama Yojana'. Under this programme subsidy in the form of materials and technical assistance would be given to rural households for construction of sanitary latrines. It is intended to build one lakh sanitary latrines every year. This will ensure that in a few years from now villages in Karnataka would be cleaner than they are at present.

38. The development of the Hydrabad-Karnataka area has received the concerted attention of my Government. After discussions with the Government of India and the Planning Commission, my Government proposes to allocate sufficient funds to this area for various developmental schemes of an essentiol nature. The imPlementation of this programme is proposed to be taken up during the next financial year itself. My Government has Proposed to give special attention to the development of the border areas.

39. My Government believes that one of the ingredients for adminisiration to be responsive is to conduct state craft in a language understood by the common man. Therefore intensive training programmes and language courses will be conducted for all Government Officers and Officials. The development of Kannada language and literature is vital to the cultural and social advancement of the people of our State. My Government will introduce a new scheme for encouraging publications in the Kannada language and also for translation of select books in the areas of Physical and Sociol Sciences, Fine Arts, Humanities etc. Every encouragement will be given to the design and manufacture of office equipment in Kannada. A project will be taken up during the current year for evolving new type systems for printing in the Kannada language. Hon'ble Members will be happy to know that my Government will start the Kannada University from the coming academic year.

40. Youth in our rural areas exhibit a lot of talent, To encourage this talent, infrastru cture required for the promotion of sports at the Taluk Lavel will be created during the VIII Five Year Plan. Apart from the Sports Complex at Mysore, three more Complexes will be constructed. Hon'ble Members will be happy to know that this year at the recently concluded Republic Day Celebrations it was the N.C,C. Cadets from the Karnataka who won the Prime Minister's Republic Day Banner.

41. Hon'ble Members, I have now come to the end of my address. You have before you a heavy agenda. Apart from the Legislative business you would also be considering the Budget for the year. I am certain that you will maintain the highest traditions of the Karnataka Legislature, and maturity and sagacity would mark your deliberations.

I wish you all success in your endeavours.

ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ಭಾಷಾಂತರ

ಸಭಾಪತಿಗಳೇ, ಸಭ್ಯಾಧಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

ರಾಜ್ಯ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮನ್ನು ಸ್ವಾಗತಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಇದು ಈ ವರ್ಷದ ಮೊತ್ತಮೊದಲ ಅಧಿವೇಶನವಾದ ಕಾರಣ ನಾನು ತಮಗೆ ಮತ್ತು ತಮ್ಮ ಮೂಲಕ ಕರ್ನಾಟಕದ ಜನತೆಗೆ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ. ಇಂದು ನಾನು ತಮ್ಮೊಂದಿಗೆ ಇರುವುದು ನನ್ನ ಸುದೈವ ಎಂದು ನಾನು ಭಾವಿಸುತ್ತೇನೆ. ಸಂಸದೀಯ ಪ್ರಜಾಪ್ರಭುತ್ವದ ಸುದೀರ್ಘ ಪರಂಪರೆಯುಳ್ಳ ಈ ಧೀಮಂತ ಸಭೆಯನ್ನು ಉದ್ದೇಶಿಸಿ ಮಾತನಾಡಲು ನನಗೆ ದೊರೆತ ಈ ಸದವಕಾಶ ನನ್ನ ಮನದಲ್ಲಿ ಅಚ್ಚಳಿಯದೇ ಉಳಿಯುತ್ತದೆ. ಕರ್ನಾಟಕದ ಉದಾತ್ತ ಮನೋಭಾವದ ಹಾಗೂ ಶಾಂತಿಪ್ರಿಯ ಜನತೆಗೆ ನನ್ನ ಸೇವೆ ಸಲ್ಲಿಸುವ ಅವಕಾಶ ದೊರೆತದ್ದು ನನಗೆ ನಿಜಕ್ಕೂ ಹೆಮ್ಮೆಯ ವಿಷಯ.

೨. ಸನ್ಮಾನ್ಯ ಸದಸ್ಯರೇ, ಕಳೆದ ತಿಂಗಳು ಬೆಂಗಳೂರಿನ ವಿಮಾನ ನಿಲ್ದಾಣದ ಹತ್ತಿರ ಸಂಭವಿಸಿದ ದಾರುಣ ವಿಮಾನ ಅಪಘಾತ ನಿಮಗೆಲ್ಲರಿಗೂ ತಿಳಿದೇ ಇದೆ. ತಮ್ಮ ಬಂಧುಮಿತ್ರರನ್ನು ಕಳೆದುಕೊಂಡ

ದುಃಖಿತಪ್ತ ಕುಟುಂಬಗಳಿಗೆ ಮತ್ತು ಗಾಯ ನೋವುಗಳಿಂದ ನೊಂದವರಿಗೆ ನಮ್ಮ ಅನುಕಂಪ ತೋರುವುದರ ಜೊತೆಗೆ. ಆ ಸಮಯದಲ್ಲಿ ಅನೇಕ ಆಸ್ಪತ್ರೆಗಳ, ಅಗ್ನಿಶಾಮಕ ದಳದ, ಗೃಹರಕ್ಷಕ ದಳದ, ಪೋಲೀಸ್ ಮತ್ತು ಬೆಂಗಳೂರು ನಗರ ಪಾಲಿಕೆಯ ಸಿಬ್ಬಂದಿ ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ಸಹ ನಾವು ಮೆಚ್ಚಲೇಬೇಕು. ಇಂತಹ ದುರಂತ ಮತ್ತೆಂದೂ ಸಂಭವಿಸದಿರಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ. ಆಲ್ಲದೆ, ಇನ್ನು ಮುಂದೆ ಸಂಭವಿಸಬಹುದಾದ ಈ ರೀತಿಯ ದುರದೃಷ್ಟಕರ ಘಟನೆಗಳನ್ನು ಎದುರಿಸಲು ಇನ್ನೂ ಹೆಚ್ಚಿನ ಸಿದ್ಧತೆಯಿಂದಿರಬೇಕೆನ್ನುವುದರ ಬಗ್ಗೆ ಸ್ವಯಂ ಪುನರವಲೋಕನ ಮಾಡಿಕೊಳ್ಳಲಾಗಿದೆ.

೩. ನಮ್ಮ ಗಡಿ ಪ್ರದೇಶದ ಆಚೆಗಿನ ನಮ್ಮ ಮಿತ್ರರು ಪದೇ ಪದೇ ನಿಯತ ಕಾಲಾಂತರಗಳಲ್ಲಿ 'ಗಡಿ ವಿವಾದ'ವನ್ನು ಎತ್ತುತ್ತಿರುವುದು ದುರ್ದೈವದ ಸಂಗತಿ. ಗಡಿ ವಿವಾದವೆಂಬುದೇ ಇಲ್ಲ ಎಂಬುವುದನ್ನು ನನ್ನ ಸರ್ಕಾರ ಅತ್ಯಂತ ಸ್ಪಷ್ಟ ಮಾತುಗಳಲ್ಲಿ ತಿಳಿಸಬಯಸುತ್ತದೆ. ಮಹಾಜನ ಆಯೋಗದ ವರದಿಯೇ ಅಂತಿಮವಾದದ್ದು ಹಾಗೂ ಬಂಧನಕಾರಿ. ಈ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು ಎಂದು ನಾನಂ ಭಾರತ ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

೪. ಕರ್ನಾಟಕವು ಯಾವಾಗಲೂ ನೆರೆಹೊರೆಯ ರಾಜ್ಯಗಳೊಂದಿಗೆ ಉತ್ತಮ ಸಂಬಂಧವನು ಉಳಿಸಿಕೊಂಡು ಬಂದಿದೆ. ಈ ಮನೋಭಾವನೆಯಿಂದಲೇ ನನ್ನ ಸರ್ಕಾರವು, ಪರಸ್ಪರ ಒಪ್ಪಿಕೊಳ್ಳಲಾಗುವ ತತ್ವಗಳಿಗನುಸಾರವಾಗಿ ಮತ್ತು ನಮ್ಮೆಲ್ಲ ಜನರ ಪ್ರಯೋಜನಕ್ಕಾಗಿ ಕಾವೇರಿ ಮತ್ತು ಕೃಷ್ಣಾ ನದಿಗಳ ನೀರನ್ನು ಹಂಚಿಕೊಳ್ಳಲು ಕರೆ ಕೊಡುತ್ತದೆ.

೫. ನಮ್ಮ ರಾಷ್ಟ್ರವು, ಇಂದು, ಸೂಕ್ಷ್ಮ ಪರಿಸ್ಥಿತಿಯ ಪ್ರದೇಶಗಳಲ್ಲಿ ಗಲಭೆ ಹಾಗೂ ಗುರುತರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಇಂತಹ ಸಮಯದಲ್ಲಿ, ಪ್ರತಿಯೊಬ್ಬ ದೇಶಾಭಿಮಾನಿ ಭಾರತೀಯನೂ ನಮ್ಮ ದೇಶದ ಏಕತೆ ಮತ್ತು ಅಖಂಡತೆಯನ್ನು ರಕ್ಷಿಸುವುದರ ಜೊತೆಗೆ, ಆ ದಿಸೆಯಲ್ಲಿ ವಾಸ್ತವಿಕ ಪ್ರಯತ್ನ ಮಾಡಬೇಕು.

೬. ಭಾರತ ಸರ್ಕಾರದ ಸಿಬ್ಬಂದಿ ಆಯ್ಕೆ ಆಯೋಗವು ಬೆಂಗಳೂರಿನಲ್ಲಿ ಉಪಪ್ರಾದೇಶಿಕ ಕಚೇರಿಯನ್ನು ತೆರೆದಿದ್ದು, ಅದಕ್ಕೆ ಉಚಿತ ಸ್ಥಳಾವಕಾಶವನ್ನು ಒದಗಿಸಲಾಗಿದೆಯೆಂಬುದು ಮಾನ್ಯ ಸದಸ್ಯರಿಗೆ ಸಂತೋಷವುಂಟು ಮಾಡುವ ವಿಷಯವಾಗಿದೆ. ಉಪಪ್ರಾದೇಶಿಕ ಕಚೇರಿಯನ್ನು ತೆರೆದಿರುವುದರಿಂದ, ಸಾಕಷ್ಟು ಪ್ರಾತಿನಿಧ್ಯ ಪಡೆಯದಿರುವ ಕನ್ನಡಿಗರಿಗೆ ಭಾರತ ಸರ್ಕಾರದ ಅಧೀನ ಹುದ್ದೆಗಳಲ್ಲಿ ಉದ್ಯೋಗಾವಕಾಶಗಳು ದೊರೆಯುವುವೆಂದು ಆಶಿಸಲಾಗಿದೆ.

೭. ತೀರಾ ಇತ್ತೀಚೆಗೆ, ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ನಡೆಸಿದ ಮುಷ್ಕರದ ವಿಷಾದನೀಯ ಘಟನೆಯನ್ನು ನಾವು ನೋಡಿದೆವು. ಸರ್ಕಾರಿ ನೌಕರರಿಗೆ ನಿಜವಾದ ಕುಂದುಕೊರತೆಗಳಿರಬಹುದಾದರೂ ಅಂಥ ಕುಂದುಕೊರತೆಗಳನ್ನು ರಾಜ್ಯದ ಅಭಿವೃದ್ಧಿ ಕಾರ್ಯತಂತ್ರದ ಸಮಗ್ರ ಚೌಕಟ್ಟಿನೊಳಗೆ ಮಾತ್ರವೇ ಪರಿಹರಿಸಿಕೊಳ್ಳಬಹುದಾಗಿದೆ. ನನ್ನ ಸರ್ಕಾರವು, ತನ್ನ ನೌಕರರ ನಿಜವಾದ ಕುಂದುಕೊರತೆಗಳನ್ನು ಪರಿಶೀಲಿಸಲು ಸಿದ್ಧವಿದೆ. ತನ್ನ ನೌಕರರೊಂದಿಗೆ ಯಾವಾಗಲೂ ಹೊಂದಿದ್ದ ಸೌಹಾರ್ದಯುತ ಸಂಬಂಧವು, ಇತ್ತೀಚೆಗೆ ಅಹಿತಕರ ಘಟನೆ ನಡೆದಿದ್ದರೂ ಮುಂದುವರಿಯುತ್ತದೆಂಬುದು ನನ್ನ ಸರ್ಕಾರದ ದೃಢ ನಂಬಿಕೆಯಾಗಿದೆ.

೮. ಆಡಳಿತದಲ್ಲಿ ದಕ್ಷತೆಯನ್ನು ಸುಧಾರಿಸುವುದು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸೇವಾ ಶಿಸ್ತನ್ನು ಕಟ್ಟುನಿಟ್ಟಾಗಿ ತರುವುದು ನನ್ನ ಸರ್ಕಾರದ ಪ್ರಮುಖ ಕಾರ್ಯಗಳಲ್ಲೊಂದು. ಆಡಳಿತ ದಕ್ಷತೆ ಅತ್ಯಂತ ಕ್ಷೀಣ ಸ್ಥಿತಿಯಲ್ಲಿರುವುದರಿಂದ ವ್ಯಾಪಕವಾಗಿ ವಿಸ್ತರಿಸಿರುವ ನೌಕರಶಾಹಿ ವ್ಯವಸ್ಥೆಯು ಜನತೆಯ ಅಗತ್ಯಗಳು ಮತ್ತು ಆಶೋತ್ತರಗಳಿಗೆ ಸಾಕಷ್ಟು ಸ್ಪಂದಿಸುತ್ತಿಲ್ಲ. ಭ್ರಷ್ಟಾಚಾರವು ವಿಸ್ತೃತವಾಗಿ ವ್ಯಾಪಿಸಿದೆ. ಜಟಿಲವಾದ ಕಾರ್ಯವಿಧಾನ ಮತ್ತು ನಿಯಂತ್ರಣಗಳು ಸುಲಭವಾಗಿ ತಪ್ಪಿಸಬಹುದಾದ ವಿಳಂಬಗಳು ಉಂಟಾಗಲು ಬಹುಪಾಲು ಕಾರಣವಾಗಿದೆ. ಈ ಸಮಸ್ಯೆಗಳನ್ನು ಹತ್ತಿಕ್ಕುವ ದೃಷ್ಟಿಯಿಂದ ನನ್ನ ಸರ್ಕಾರವು ಪಾರದರ್ಶಕ ರಂಗಗಳಲ್ಲಿ ಕ್ರಮ ಆರಂಭಿಸಲಿದೆ, ಮೊದಲನೆಯದಾಗಿ, ಆಡಳಿತದ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರದ ಕಾರ್ಯಗಳು ದಕ್ಷ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು ದಕ್ಷತಾ ಪರಿಶೋಧನೆ ಮತ್ತು ಜಾಗೃತ ಮಂಡಳಿಯನ್ನು ರಚಿಸುವುದು ಹಾಗೂ ಭ್ರಷ್ಟಾಚಾರ, ಅಲಕ್ಷ್ಯ, ಕರ್ತವ್ಯಲೋಪ, ಅದಕ್ಷತೆ ಮತ್ತು ದುಂದುವೆಚ್ಚ ಹಾಗೂ ಹೊಣೆಗಾರಿಕೆ-ಇವುಗಳ ಬಗ್ಗೆ ಪರಿಶೀಲನೆ ಮಾಡುವ ಜವಾಬ್ದಾರಿಯನ್ನು ಈ ಮಂಡಳಿಗೆ ಒಪ್ಪಿಸುವುದು. ಎರಡನೆಯದಾಗಿ, ಆಡಳಿತವನ್ನು ಹೆಚ್ಚು ದಕ್ಷತೆ, ಹೊಣೆಗಾರಿಕೆ, ಸ್ಪಂದನೀಯ ಮತ್ತು ಸೌಜನ್ಯಯುತ ಯಂತ್ರವನ್ನಾಗಿ ಮಾಡುವ ಉದ್ದೇಶದಿಂದ, ಕಾರ್ಯವಿಧಾನವನ್ನು ಮರು ವಿನ್ಯಾಸಗೊಳಿಸಲು, ಪದ್ಧತಿ ಮತ್ತು ಮಾನವಶಕ್ತಿ

ಯೋಜನೆಯನ್ನು ಪುನರ್ ರೂಪಿಸಲು, ಅನುಭವಶೀಲ ಸರ್ಕಾರಿ ನೌಕರರ ಮತ್ತು ನಿಪುಣ ವ್ಯವಸ್ಥಾಪನ ತಜ್ಞರನ್ನೊಳಗೊಂಡ ಪದ್ಧತಿ ಪರಿಶೋಧನಾ ಸಂಸ್ಥೆಯನ್ನು ಸ್ಥಾಪಿಸುವುದು ಮೂರನೆಯದಾಗಿ, ಉನ್ನತ ಅಧಿಕಾರಿಗಳೂ ಸೇರಿದಂತೆ ಎಲ್ಲಾ ಹಂತಗಳ ಅಧಿಕಾರಿಗಳ ಕಾರ್ಯಸಾಮರ್ಥ್ಯವನ್ನು ಪರಿಶೀಲಿಸಲಂ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯ ಮೂರ್ತಿಗಳ ನೇತೃತ್ವದಲ್ಲಿ ಪರಿಶೀಲನಾ ಸಮಿತಿಯೊಂದನ್ನು ರಚಿಸಲಾಗುತ್ತಿದೆ. ಈ ಪರಿಶೀಲನೆಯಿಂದ ಸರ್ಕಾರಿ ಸೇವೆಯಲ್ಲಿ ಅರ್ಥ ಅಧಿಕಾರಿಗಳ ಸೇವೆಯನ್ನು ಮುಂದುವರಿಸುವುದರ ಬಗ್ಗೆ ತೀರ್ಮಾನಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ.

೯. ಕೆಲವು ಅಪರೂಪದ ನಿದರ್ಶನಗಳನ್ನು ಬಿಟ್ಟರೆ ನನ್ನ ಸರ್ಕಾರವು ಅಧಿಕಾರವಹಿಸಿಕೊಂಡಾಗಿನಿಂದಲೂ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿಕೊಂಡು ಬಂದಿದೆ. ನನ್ನ ಸರ್ಕಾರವು, ಶಾಂತಿಯುತ ಪರಿಸ್ಥಿತಿಯನ್ನು ಕಾಪಾಡಿಕೊಂಡು ಬರುವ ತನ್ನ ತೀವ್ರ ಪ್ರಯತ್ನವನ್ನು ಮುಂದುವರಿಸಿಕೊಂಡು ಹೋಗುತ್ತದೆ.

೧೦, ಕಾನೂನು ಪಾಲನೆ ಮತ್ತು ಸುವ್ಯವಸ್ಥೆಯನ್ನು ತರುವ ಇಲಾಖೆಯು ಇನ್ನೂ ಹೆಚ್ಚು ಸುಸಂಗತವಾಗಿ ಮತ್ತು ದಕ್ಷತೆಯಿಂದ ಕಾರ್ಯ ನಿರ್ವಹಿಸುವುದು ಅವಶ್ಯಕವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು, ಪೊಲೀಸ್ ದಳವನ್ನು ಆಧುನೀಕರಿಸಲು ಮತ್ತು ಬಲಗೊಳಿಸಲು ಅನೇಕ ಕ್ರಮಗಳನ್ನು ನನ್ನ ಸರ್ಕಾರವು ತೆಗೆದುಕೊಳ್ಳುತ್ತಿದೆ. ಹೊಸ ಪೋಲೀಸ್ ಠಾಣೆಗಳನ್ನು, ವಿಶೇಷವಾಗಿ ಹೊಸ ಕೈಗಾರಿಕಾ ಟೌನ್‌ಷಿಪ್‌ಗಳಲ್ಲಿ ಮತ್ತು ಬೆಳೆಯುತ್ತಿರುವ ನಿವಾಸ ಕಾಲೋನಿಗಳಲ್ಲಿ ಹಂತ ಹಂತವಾಗಿ ಸ್ಥಾಪಿಸಲಂ ಕಾರ್ಯಕ್ರಮವೊಂದನ್ನು ರೂಪಿಸಲಾಗಿದೆ. ಪೋಲೀಸ್ ದಳಗಳ ಸಂಚಾರ ಮತ್ತು ಸಂಪರ್ಕ ಜಾಲವನ್ನು ವಿಸ್ತರಿಸುವುದಕ್ಕೆ ವಿಶೇಷ ಗಮನ ನೀಡಲಾಗುವುದು.

೧೧. ಕಳೆದ ಕೆಲವು ತಿಂಗಳುಗಳಲ್ಲಿ ವಿಶೇಷವಾಗಿ ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳ ಹೊರವಲಯಗಳಲ್ಲಿ ಡಕಾಯಿತಿ ಪ್ರಕರಣಗಳಲ್ಲಿ ಸ್ವಲ್ಪ ಹೆಚ್ಚಳ ಉಂಟಾಗಿದೆ. ನನ್ನ ಸರ್ಕಾರವು ಈ ವಿಪತ್ತಿನ ಭಯದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಅನೇಕ ಕ್ರಮಗಳನ್ನು ಪ್ರಾರಂಭಿಸಲು ಮತ್ತು ಅವುಗಳನ್ನು ಮುಂದುವರಿಸಲು ಉದ್ದೇಶಿಸಿದೆ. ಒಂದು ವಿಶೇಷ ಡಕಾಯಿತಿ ನಿರೋಧಕ ಘಟಕವನ್ನು ಸ್ಥಾಪಿಸಲಾಗಿದೆ. ವಿಶೇಷವಾಗಿ ರಾತ್ರಿ ಪಹರೆಗಳನ್ನು ಪ್ರಾರಂಭಿಸುವುದರ ಮೂಲಕ ಪೋಲೀಸ್ ಜಾಗರೂಕತೆಯನ್ನು ತೀವ್ರಗೊಳಿಸಲಾಗಿದೆ. ವಾಹನಗಳು ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳು ಮತ್ತು ಸಂಪರ್ಕ ವ್ಯವಸ್ಥೆಯ ರೂಪದಲ್ಲಿ ಸಾಕಷ್ಟು ಬೆಂಬಲ ನೀಡಲಾಗುತ್ತಿದೆ.

೧೨. ಸರ್ಕಾರಿ ನೌಕರರ ಸೇವಾ ನಿವೃತ್ತಿ ವಯಸ್ಸನ್ನು ಈಗಿನ ೫೮ ವರ್ಷಗಳಿಂದ ೫೫ ವರ್ಷಗಳಿಗೆ ಇಳಿಸಬೇಕೆಂದು ಕೋರಿ ಅನೇಕ ಮನವಿಗಳು ಬರುತ್ತಿವೆ. ಈ ಕೋರಿಕೆಗಳು ವಿಶೇಷವಾಗಿ ಬಹುಪಾಲು ಸುಶಿಕ್ಷಿತ ನಿರುದ್ಯೋಗಿ, ಯುವಜನರಿಂದ ಬಂದಂಥವುಗಳಾಗಿವೆ. ನನ್ನ ಸರ್ಕಾರವು ಈ ವಿಷಯವನ್ನು ಎಲ್ಲಾ ದೃಷ್ಟಿಕೋನಗಳಿಂದ ಎಚ್ಚರಿಕೆಯಿಂದ ಪರ್ಯಾಲೋಚಿಸಬಯಸುತ್ತದೆ.

೧೩. ರಾಜ್ಯದ ಏಳು ಜಿಲ್ಲೆಗಳಲ್ಲಿ ಹೆಂಡದ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲಾಗಿದೆ. ಹೆಂಡದ ಪರಿಶುದ್ಧತೆಯ ಬಗ್ಗೆ ಕಟ್ಟುನಿಟ್ಟಾದ ಎಚ್ಚರಿಕೆ ಮತ್ತು ನಿಯಂತ್ರಣವಿದ್ದರೂ ಕೂಡ, ಅಪಾಯಕಾರಿ ಜನರಿಗೆ, ಯಾವುದಕ್ಕೂ ಹಿಂಜರಿಯದ ಶಕ್ತಿಗಳು ಕಲಬೆರಕೆಯ ಮತ್ತು ನಕಲಿ ಹೆಂಡವನ್ನು ಸರಬರಾಜು ಮಾಡುತ್ತಿರುವ ಬಗ್ಗೆ ಅಸಂಖ್ಯಾತ ದೂರುಗಳು ಬಂದಿವೆ. ಪ್ರಯೋಜ್ಯ, ಜನರ ಆರೋಗ್ಯವನ್ನು ರಕ್ಷಿಸುವ ಉದ್ದೇಶದಿಂದ, ನನ್ನ ಸರ್ಕಾರವು ೧೯೬೦-೧೧ನೇ ಆಬಕಾರಿ ವರ್ಷದ ಪ್ರಾರಂಭದಿಂದ ಜಾರಿಗೆ ಬರುವಂತೆ ರಾಜ್ಯಾದ್ಯಂತ ಹೆಂಡದ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲು ನಿರ್ಧರಿಸಿದೆ. ಇಂಥ ಕ್ರಮದಿಂದ ರಾಜ್ಯದ ಆದಾಯದಲ್ಲಿ ಗಣನೀಯ ನಷ್ಟವುಂಟಾಗಬಹುದಾದರೂ ಜನರ ಕಲ್ಯಾಣವನ್ನು ಮನಸ್ಸಿನಲ್ಲಿಟ್ಟುಕೊಂಡು ನನ್ನ ಸರ್ಕಾರವು ಈ ಪ್ರಜ್ಞಾಪೂರ್ವಕ ನಿಲುವನ್ನು ತೆಗೆದುಕೊಂಡಿದೆ.

೧೪. ಸರ್ಕಾರಿ ಜಮೀನುಗಳ ಅನಧಿಕೃತ ಸ್ವಾಧೀನಾನುಭವವನ್ನು ಸಕ್ರಮಗೊಳಿಸಲು ನನ್ನ ಸರ್ಕಾರವು ತತ್ವಶಃ ಒಂದು ಪ್ರಜ್ಞಾಪೂರ್ವಕ ನಿರ್ಣಯವನ್ನು ತೆಗೆದುಕೊಂಡಿದೆ ಎಂಬುದು ಮಾನ್ಯ ಸದಸ್ಯರಿಗೆ ಸಂತೋಷವನ್ನುಂಟು ಮಾಡುವ ವಿಷಯವಾಗಿದೆ. ಇಂಥ ಅನಧಿಕೃತ ಸರ್ಕಾರಿ ಜಮೀನುಗಳನ್ನು ಸಕ್ರಮಗೊಳಿಸುವಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳು, ಭೂ ರಹಿತ ಕೃಷಿ ಕಾರ್ಮಿಕರು ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆ ನೀಡಲಾಗುತ್ತದೆಂಬುದನ್ನು ಹೇಳಬೇಕಾದ ಅಗತ್ಯವಿಲ್ಲ. ಭೂ ಸುಧಾರಣಾ ಕ್ಷೇತ್ರದಲ್ಲಿ ಗಣನೀಯ ಕಾರ್ಯವನ್ನು ಮಾಡಲಾಗಿದೆ ಮತ್ತು ನ್ಯಾಯ ಮಂಡಳಿಗಳ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಉಳಿದ ಕಾರ್ಯವನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಕರ್ನಾಟಕ ಭೂ ಸುಧಾರಣಾ ಅಧಿನಿಯಮಕ್ಕೆ ತರಬೇಕೆಂದಿರುವ ಕೆಲವು ತಿದ್ದುಪಡಿಗಳು ಸರ್ಕಾರದ ಪರಿಶೀಲನೆಯಲ್ಲಿವೆ.

೧೫. ನಗರ ಗೃಹ ನಿರ್ಮಾಣ ಕ್ಷೇತ್ರದಲ್ಲಿ, ನನ್ನ ಸರ್ಕಾರವು, ಮುಂಬರುವ ವರ್ಷದಲ್ಲಿ ಕೊಳಚೆ ನಿವಾಸಿಗಳಿಗೆ ಮನೆಗಳನ್ನು ನಿರ್ಮಿಸುವ ಒಂದು ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ನಗರದ ನಿರುದ್ಯೋಗಿ ಮತ್ತು ಅರೆ ಉದ್ಯೋಗಿ ಬಡಜನರಿಗೆ ಹೊಸ ಉದ್ಯೋಗಾವಕಾಶಗಳನ್ನು ಸೃಜಿಸುವ ಧ್ಯೇಯೋದ್ದೇಶ ಹೊಂದಿರುವ ಜವಾಹರ್ ರೋಜ್‌ಗಾರ್ ಯೋಜನೆಯನ್ನು ಮುಂಬರುವ ವರ್ಷಗಳಲ್ಲಿ ಅತ್ಯಂತ ಮುತುವರ್ಜಿಯಿಂದ ಕಾರ್ಯಗತಗೊಳಿಸಲಾಗುವುದು. ನಗರ ಪ್ರದೇಶಗಳಲ್ಲಿ ಚಿಕ್ಕಪುಟ್ಟ ಉದ್ಯಮಗಳನ್ನು ಪ್ರಾರಂಭಿಸುವುದು, ನಗರದ ಬಡಜನರಿಗೆ ವಾಸದ ಮನೆಗಳ ನಿರ್ಮಾಣ ಮತ್ತು ನಗರ ಮಜೂರಿ ಉದ್ಯೋಗಗಳನ್ನು ಸೃಜಿಸುವುದು ಈ ಯೋಜನೆಯಲ್ಲಿ ಒಳಗೊಂಡಿವೆ.

೧೬. ರಾಜ್ಯದಲ್ಲಿನ ಕೈಗಾರಿಕೆಗಳಲ್ಲಿ ಹಣ ಹೂಡಿಕೆಯು ಕಳೆದ ಕೆಲವು ವರ್ಷಗಳಿಂದ ಒಂದೇ ಸಮನೆ ಕಡಿಮೆಯಾಗುತ್ತಿರುವುದು ನನ್ನ ಸರ್ಕಾರಕ್ಕೆ ತೀವ್ರ ಆತಂಕದ ವಿಷಯವಾಗಿದೆ. ನನ್ನ ಸರ್ಕಾರವು, ಕೈಗಾರಿಕಾ ಅಭಿವೃದ್ಧಿಗೆ ಅಗತ್ಯವಾದ ಪ್ರಾಮುಖ್ಯತೆ ನೀಡುವ ಮೂಲಕ ಈ ನಕಾರಾತ್ಮಕ ಪ್ರವೃತ್ತಿಯನ್ನು ತಡೆಗಟ್ಟಲು ಉದ್ದೇಶಿಸುತ್ತದೆ. ಉತ್ಪಾದನಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮತ್ತು ಆಕರ್ಷಕ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳನ್ನು ನೀಡಲು ಸರ್ವ ಪ್ರಯತ್ನ ಮಾಡಲಾಗುವುದು. ಸಣ್ಣ ಪ್ರಮಾಣದ ಹಾಗೂ ಚಿಕ್ಕಪುಟ್ಟ ಉದ್ಯಮಗಳ ಬೆಳವಣಿಗೆಗೆ ವಿಶೇಷ ಒತ್ತು ನೀಡುವುದರ ಜೊತೆಗೆ ಭಾರೀ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೂ ಸಹ ಪ್ರತಿಯೊಂದು ಉತ್ತೇಜನವನ್ನು ನೀಡಲಾಗುವುದು.

೧೭. ರಾಜ್ಯದಲ್ಲಿನ ರೋಗಗ್ರಸ್ತ ಜವಳಿ ಮತ್ತು ಸಕ್ಕರೆ ಘಟಕಗಳ ಅಧ್ಯಯನಕ್ಕಾಗಿ ಒಂದು ವಿಶೇಷ ಘಟಕವನ್ನು ರಚಿಸಲಾಗಿದೆ. ಸೂಕ್ತ ಪುನರ್ಚೇತನ ಮತ್ತು ಪುನಃಸಜ್ಜೀಕರಣ ಕ್ರಮಗಳನ್ನು ತೆಗೆದುಕೊಳ್ಳಲು ಈ ಅಧ್ಯಯನವು ಅನುವು ಮಾಡಿಕೊಡುತ್ತದೆಂದು ನಿರೀಕ್ಷಿಸಲಾಗಿದೆ.

೧೮. ಕರ್ನಾಟಕದಲ್ಲಿ ಈಗ ೬೨ ಸಾರ್ವಜನಿಕ ವಲಯ ಉದ್ಯಮಗಳಿದ್ದು ಅವುಗಳಲ್ಲಿ ಭಾರಿ ಮೊತ್ತದ ಹಣ ಹೂಡಲಾಗಿದೆ. ತೆರಿಗೆ ಸಂದಾಯದ ನಂತರ, ಅವುಗಳಲ್ಲಿ ಕೆಲವು ಮಾತ್ರವೇ ಲಾಭ ಗಳಿಸಿರುವುದು ದುರದೃಷ್ಟಕರ. ಇಂದಿನ ಪರಿಸರ ಹಾಗೂ ಒತ್ತಡಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆಗೊಂದು ಉದ್ಯಮಗಳ ಸುಸಂಬದ್ಧತೆಯನ್ನು ನಿರ್ಧರಿಸುವ ಸಮಯ ಈಗ ಬಂದಿದೆ. ತೀರಾ ರೋಗಗ್ರಸ್ತವಾದ ಈ ಸಾರ್ವಜನಿಕ ವಲಯ ಉದ್ಯಮಗಳನ್ನು ನಡೆಸಿಕೊಂಡು ಹೋಗಲು ರಾಜ್ಯದ ಅತ್ಯಮೂಲ್ಯ ಸಂಪನ್ಮೂಲಗಳನ್ನು ಬಳಸುವುದು ಸರಿಯಲ್ಲ. ಆದ್ದರಿಂದ ನನ್ನ ಸರ್ಕಾರವು ಅವುಗಳನ್ನು ಸಮರ್ಥಗೊಳಿಸುವ ಸಲುವಾಗಿ ಲಭ್ಯವಿರುವ ಎಲ್ಲಾ ಪರ್ಯಾಯ ಕ್ರಮಗಳನ್ನು ಪರಿಶೀಲಿಸಲು ಉದ್ದೇಶಿಸಲಾಗಿದೆ.

೧೯. ಈ ವರ್ಷ, ಕರ್ನಾಟಕ ರೇಷ್ಮೆ ಕೃಷಿ IIನೇ ಯೋಜನೆಯು IIನೇ ಹಂತದ ವ್ಯಾಪ್ತಿಗೆ ಇನ್ನೂ ೧೫ ೦೦೦ ಹೆಕ್ಟೇರ್ ಭೂಮಿಯನ್ನು ಉಪ್ಪುನೇರಳೆ ಬೇಸಾಯಕ್ಕೆ ಒಳಪಡಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯು, ಖಂಡಿತವಾಗಿಯೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಹೆಚ್ಚಿನ ಉದ್ಯೋಗಗಳನ್ನು ಸೃಜಿಸುತ್ತದೆ. ರೇಷ್ಮೆ ಉತ್ಪಾದನೆಯು ಶೇಕಡಾ ೨೪ರಷ್ಟು ಹೆಚ್ಚುತ್ತದೆಂದು ನಿರೀಕ್ಷಿಸಲಾಗಿದೆ. ರೇಷ್ಮೆ ಅಭಿವೃದ್ಧಿ ಕ್ಷೇತ್ರದಲ್ಲಿ ಮಹತ್ವ ನೀಡಬೇಕಾದ ಅಂಶವೆಂದರೆ, ಖಾಸಗಿ ಉದ್ಯಮಗಳ ಸಾಮರ್ಥ್ಯವನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಸ್ಥಿರವಾದ ಹಾಗೂ ಕಡಿಮೆ ವೆಚ್ಚದ ಸಾರ್ವಜನಿಕ ಉದ್ಯಮಗಳ ಅಭಿವೃದ್ಧಿಯನ್ನು ಖಾತ್ರಿಪಡಿಸಿಕೊಳ್ಳುವುದಾಗಿದೆ.

೨೦. ನನ್ನ ಸರ್ಕಾರವು, ವಿದ್ಯುಚ್ಛಕ್ತಿ ವಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದರೂ ಈ ವಲಯವೇ ಹೆಚ್ಚಿನ ಆತಂಕವನ್ನುಂಟು ಮಾಡುತ್ತಿದೆ. ಜಲವಿದ್ಯುತ್ ರಂಗದಲ್ಲಿ ಹೆಚ್ಚಿನ ಸಾಮರ್ಥ್ಯವನ್ನು ಸೃಜಿಸಲಾಗಿದ್ದರೂ ಮಳೆ ತೀರಾ ಕಡಿಮೆ ಬಿದ್ದುದರಿಂದಾಗಿ ದೊಡ್ಡ ಜಲಾಯಶಗಳಲ್ಲಿ ನಿರೀಕ್ಷಿಸಿದಷ್ಟು ನೀರು ಸಂಗ್ರಹವಾಗಲಿಲ್ಲ, ಪರಿಣಾಮವಾಗಿ, ಅಗತ್ಯವಿರುವ ಹಾಗೂ ದೊರೆಯುತ್ತಿರುವ ವಿದ್ಯುಚ್ಛಕ್ತಿಯ ನಡುವೆ ಅಂತರವಿದೆ. ಆದ್ದರಿಂದ ವಿದ್ಯುಚ್ಛಕ್ತಿ ಉತ್ಪಾದನೆಯ ಸಾಮರ್ಥ್ಯವನ್ನು ಸಮರೋಪಾದಿಯಲ್ಲಿ ಹೆಚ್ಚಿಸುವುದು ಅವಶ್ಯಕವಾಗಿದೆ. ಹಲವಾರು ಯೋಜನೆಗಳ ಕಾರ್ಯ ಯೋಜಿಸಿದಂತೆ ಮುಂದುವರಿಯುತ್ತಿದೆ. ಕರ್ನಾಟಕದಲ್ಲಿನ ಎಲ್ಲ ನಿವಾಸಿ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಒದಗಿಸಲಾಗಿದೆಯೆನ್ನುವುದು ಹೆಮ್ಮೆಯ ವಿಷಯವಾಗಿದೆ. ಈ ವರ್ಷ, ಸಣ್ಣ ಹಳ್ಳಿಗಳನ್ನು, ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳನ್ನು ಮತ್ತು ಬುಡಕಟ್ಟು ಕಾಲೋನಿ ಹಾಗೂ ತಾಂಡಗಳನ್ನು ವಿದ್ಯುದ್ದೀಕರಣಗೊಳಿಸುವುದಕ್ಕೆ ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಪ್ರಾಶಸ್ತ್ಯ ನೀಡಲಾಗುತ್ತದೆ.

೨೧. ವಿದ್ಯುಚ್ಛಕ್ತಿ ವಲಯವಲ್ಲದೆ, ನೀರಾವರಿಯು ಇನ್ನೊಂದು ಸೂಕ್ಷ್ಮ ವಲಯವಾಗಿದ್ದು, ಈ ವಲಯಕ್ಕೂ ನನ್ನ ಸರ್ಕಾರವು ವಿಶೇಷ ಗಮನ ನೀಡುತ್ತದೆ. ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿಯಲ್ಲಿ ೩೫.೧೭೧ ಹೆಕ್ಟೇರಷ್ಟು ಭೂಮಿಗೆ ನೀರಾವರಿಯನ್ನೊದಗಿಸಲು ಮತ್ತು ಸಣ್ಣ ನೀರಾವರಿ ಯೋಜನೆಗಳಡಿಯಲ್ಲಿ ೯೯೧೩ ಹೆಕ್ಟೇರಷ್ಟು ಭೂಮಿಗೆ ನೀರಾವರಿಯನ್ನೊದಗಿಸಲು ಉದ್ದೇಶಿಸಲಾಗಿದೆ. ೪೮,೦೦೦ ಹೆಕ್ಟೇರಷ್ಟು ಭೂಮಿಗೆ ನೀರಾವರಿಯನ್ನೊದಗಿಸುವ ಸಲುವಾಗಿ ಅಂತರ್ಜಲವನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ನನ್ನ ಸರ್ಕಾರವು, ಕೃಷ್ಣಾ ಮೇಲ್ದಂಡೆ ಯೋಜನೆಯ Iನೇ ಘಟ್ಟದ IIನೇ ಹಂತವನ್ನು ಯೋಜಿತ ವೇಳೆಯಲ್ಲಿ ಪೂರ್ಣಗೊಳಿಸಲು ಸರ್ವ ಪ್ರಯತ್ನ ಮಾಡುತ್ತದೆ. ಕರ್ನಾಟಕದಲ್ಲಿ ಅನೇಕ ಕೆರೆಗಳು ಮತ್ತು ತುಂಬಾ ಪ್ರಾಚೀನ ನದೀ ಕಾಲುವೆಗಳು ಇವೆ. ಅವುಗಳಲ್ಲಿ ಕೆಲವು ವಿಜಯನಗರ ಸಾಮ್ರಾಜ್ಯದಷ್ಟು ಹಿಂದಿನವು. ಈ ಯೋಜನೆಯ ಅವಧಿಯಲ್ಲಿ ವ್ಯಾಪಕ ಕಾರ್ಯಕ್ರಮವೊಂದನ್ನು ಕೈಗೊಳ್ಳಲು ಸಾಧ್ಯವಾಗುವಂತೆ ಈ ನದೀ ಕಾಲುವೆಗಳನ್ನು ಜೀರ್ಣೋದ್ಧಾರ ಮಾಡುವ ಮತ್ತು ಕೆರೆಗಳ ಹೂಳೆತ್ತುವ ಒಂದು ಪ್ರಾಯೋಗಿಕ ಕಾರ್ಯಯೋಜನೆಯನ್ನು ರೂಪಿಸಲಾಗಿದೆ. ಸಮುದ್ರ ಕೊರೆತ ತಡೆಗಟ್ಟುವ ಮತ್ತು ಪ್ರವಾಹ ನಿಯಂತ್ರಣ ಕಾಮಗಾರಿಗಳಿಗೆ ಹೆಚ್ಚು ಗಮನ ನೀಡಲಾಗುವುದು. ಹಳೆ ಮಂಗಳೂರು ಬಂದರಿನಲ್ಲಿ ಅಲೆಗಳನ್ನು ತಡೆಯುವ ಒಡ್ಡಿನ ನಿರ್ಮಾಣವನ್ನು ಮುಂಬರುವ ವರ್ಷದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

೨೨. ಇನ್ನಷ್ಟು ಉನ್ನತ ಮಟ್ಟದ ದೃಶ್ಯನಿರೂಪಣೆ, ಭೂಪಟ ಲೇಖನ ಮತ್ತು ದಾಖಲೆಗಳ ವರ್ಗೀಕರಣ ವ್ಯವಸ್ಥೆ—ಇವುಗಳಿಗೆ ಸೌಲಭ್ಯಗಳನ್ನು ಒದಗಿಸಿ ಸಜ್ಜುಗೊಳಿಸುವ ಮೂಲಕ, ಮುಂಬರುವ ವರ್ಷದಲ್ಲಿ, ರಾಜ್ಯದೂರ ಸಂವೇದಿ ಕೇಂದ್ರವನ್ನು ಮತ್ತಷ್ಟು ಬಲಪಡಿಸಲಾಗುವುದು. ಈ ಕೇಂದ್ರವು, ಈ ವರ್ಷ ನೀರಾವರಿ, ಖನಿಜಗಾರಿಕೆ ಮತ್ತು ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಯಂಥ ಸರ್ಕಾರಿ ಇಲಾಖೆಗಳ ಸಹಯೋಗದೊಂದಿಗೆ ದೂರ ಸಂವೇದಿ ಯೋಜನೆಗಳನ್ನು ಕೈಗೊಳ್ಳಲಿದೆ. ಈ ವರ್ಷದಿಂದ ಬರಗಾಲ ಮೇಲ್ವಿಚಾರಣೆಯ ವಿಶೇಷ ಕೇಂದ್ರವು ಬರಗಾಲಕ್ಕೀಡಾಗುವ ನಿರ್ದಿಷ್ಟ ಪ್ರದೇಶ ಗಳನ್ನು ನಿಯತವಾಗಿ ಪ್ರಕಟಿಸುವುದು. ಈ ಎಲ್ಲ ಕ್ರಮಗಳು ಬರಗಾಲವನ್ನು ನಿಭಾಯಿಸುವ ಅಲ್ಪಾವಧಿ ಮತ್ತು ದೀರ್ಘಾವಧಿ ಕ್ರಮಗಳ ವಿಕಾಸಕ್ಕೆ ಅನುವು ಮಾಡಿಕೊಡುತ್ತವೆ.

೨೩. ಕೆಲವು ಹೊಟನೆಗಳನ್ನು ಬಿಟ್ಟರೆ ಕರ್ನಾಟಕದ ಕೈಗಾರಿಕಾ ರಂಗವು ಒಟ್ಟಾರೆ ಶಾಂತಿಯುತ ವಾಗಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಪ್ರತ್ಯೇಕ ತರಬೇತಿಯನ್ನು ನೀಡುತ್ತಿರುವುದರೊಂದಿಗೆ, ರಾಜ್ಯದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವಿಶೇಷ ತರಬೇತಿ ಕುರಿತ ಯೋಜನೆಗಳನ್ನು ಮುಂದುವರಿಸಲಾಗುವುದು. ಧಂಡಿಕೇರಿ, ರಾಯಚೂರು ಮತ್ತು ಹುಬ್ಬಳ್ಳಿ ಈ ಮೂರು ಕೈಗಾರಿಕಾ ತಾಂತ್ರಿಕ ತರಬೇತಿ ಸಂಸ್ಥೆಗಳಲ್ಲಿ ಈಗ ಮಹಿಳೆಯರಿಗಾಗಿ ಪ್ರತ್ಯೇಕ ವಿಭಾಗಗಳಿವೆ.

೨೪. ನನ್ನ ಸರ್ಕಾರವು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ ಮತ್ತು ಸಾಮಾಜಿಕ ಪ್ರಗತಿಗೆ ಕಂಕಣ ಬದ್ಧವಾಗಿದೆ. ಈ ವರ್ಗಗಳ ವಿದ್ಯಾರ್ಥಿಗಳು ಈಗ ಹೆಚ್ಚಿಸಲಾಗಿರುವ ದರ್ಜೆವಾರು ವಿದ್ಯಾರ್ಥಿವೇತನ ಪಡೆಯುತ್ತಾರೆ. ಊಟೋಪಚಾರದ ವೆಚ್ಚಗಳನ್ನು ಸಹ ಪರಿಷ್ಕರಿಸಲಾಗುವುದು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡ ಗಳಿಗೆ ಸೇರಿದಂಥ ರ್ಯಾಂಕ್ ವಿಜೇತರಿಗೆ ಸರ್ಕಾರದಲ್ಲಿ ನೇರ ಉದ್ಯೋಗ ದೊರೆಯುವಂತೆ ನನ್ನ ಸರ್ಕಾರವು ನೋಡಿಕೊಳ್ಳುವುದು. ಈ ಬಗ್ಗೆ ಆದೇಶಗಳನ್ನು ಹೊರಡಿಸಲಾಗಿದೆ. ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪಯೋಜನೆಯ ಪ್ರಯೋಜನಗಳು ಉದ್ದೇಶಿತ ಫಲಾನುಭವಿಗಳಿಗೆ ತಪ್ಪದೆ ತಲುಪುವುದನ್ನು ಖಚಿತಪಡಿಸಿಕೊಳ್ಳಲು, ಅವುಗಳ ಕಾರ್ಯಾಚರಣೆಯ ಬಗ್ಗೆ ಸೂಕ್ಷ್ಮ ಮೇಲ್ವಿಚಾರಣೆ ನಡೆಸಲಾಗುವುದು.

೨೫. ನನ್ನ ಸರ್ಕಾರವು, ೧೯೯೦ ಏಪ್ರಿಲ್ ತಿಂಗಳ ಮಧ್ಯಭಾಗದ ಹೊತ್ತಿಗೆ ಹಿಂದುಳಿದ ವರ್ಗಗಳ IIIನೇ ಆಯೋಗವು ತನ್ನ ವರದಿಯನ್ನು ಸಲ್ಲಿಸುವುದೆಂದು ನಿರೀಕ್ಷಿಸಿದೆ. ವರದಿ ಬಂದ ಕೂಡಲೇ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಲಾಗುವುದು ಮತ್ತು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

೨೬. ಕ್ರಿ.ಶ. ೨೦೦೦ದ ಹೊತ್ತಿಗೆ "ಎಲ್ಲರಿಗೂ ಆರೋಗ್ಯ' ಈ ಧ್ಯೇಯವನ್ನು ಸಾಧಿಸುವ ಗುರಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ಇಲಾಖೆಯು ಹೊಂದಿಕೊಂಡಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮುಂಬರುವ ವರ್ಷದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗುವುದು. ೫೦ ಪ್ರಾಥಮಿಕ ಆರೋಗ್ಯ

ಕೇಂದ್ರಗಳನ್ನು ಸ್ಥಾಪಿಸಲಾಗುವುದು ಮತ್ತು ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆಚ್ಚುವರಿ ಪರಿಕರಗಳನ್ನು ಒದಗಿಸಲಾಗುವುದು. ಪ್ರಸೂತಿ ಸೌಲಭ್ಯಗಳ ಕೊರತೆಯಿಂದಾಗಿ ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ಸಂಖ್ಯೆಯ ಮಕ್ಕಳ ಜನನವು ಮನೆಗಳಲ್ಲಿಯೇ ಆಗುತ್ತಿದೆ. ಅವರಲ್ಲೂ ಅನಾರೋಗ್ಯಕರ ಮತ್ತು ಅನೈರ್ಮಲ್ಯ ಪರಿಸ್ಥಿತಿಗಳಲ್ಲೇ ಆಗುತ್ತಿದೆ. ಆದುದರಿಂದ ನನ್ನ ಸರ್ಕಾರವು ಪ್ರತಿ ವರ್ಷವೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಹೊಂದಿಕೊಂಡಂತೆ ೧೦೦ ಪ್ರಸೂತಿ ಹಾಗೂ ಕಲ್ಯಾಣ ವಾರ್ಡುಗಳನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮವೊಂದನ್ನು ಪ್ರಾರಂಭಿಸುತ್ತದೆ. ಈ ಪ್ರಮುಖ ಸೌಲಭ್ಯಗಳ ಸೃಜನೆಯಲ್ಲಿ ಜನತೆ ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ. ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಮಂಡಲ ಪಂಚಾಯಿತಿಗಳು ನಿಧಿಗಳನ್ನು ಒದಗಿಸಲು ಸಮರ್ಥವಾಗಿವೆಯೋ ಅಥವಾ ಸ್ಥಳೀಯ ಜನರು ಮತಿಕೆ ಸಲ್ಲಿಸಲು ಸಮರ್ಥರಿದ್ದಾರೋ ಅಂಥ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಹೆರಿಗೆ ವಾರ್ಡುಗಳನ್ನು ಮಂಜೂರು ಮಾಡಲಾಗುತ್ತದೆ.

೨೭. ನನ್ನ ಸರ್ಕಾರದ ನಿರಂತರ ಪ್ರಯತ್ನಗಳು ಫಲಪ್ರದವಾದ ಕಾರಣ ಭಾರತ ಸರ್ಕಾರವು, ಸಾರ್ವಜನಿಕ ವಿತರಣೆಗಾಗಿ ರಾಜ್ಯಕ್ಕೆ ಹಂಚಿಕೆ ಮಾಡುವ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸಿದೆ. ಭಾರತ ಸರ್ಕಾರವು ಹಂಚಿಕೆಯನ್ನು ಹೆಚ್ಚಿಸಿದ್ದರೂ ಗ್ರಾಹಕರ ಕನಿಷ್ಟ ಅಗತ್ಯತೆಗಳನ್ನು ಪೂರೈಸಲು ತಿಂಗಳೊಂದಕ್ಕೆ ಬೇಕಾಗುವ ೭೫,೦೦೦ ದಶಲಕ್ಷಟನ್ನುಗಳಷ್ಟು ಅಕ್ಕಿಯು ದೊರೆಯುತ್ತಿಲ್ಲ. ರಾಜ್ಯಕ್ಕೆ ಹೆಚ್ಚಿನ ಹಂಚಿಕೆಯನ್ನು ಪಡೆದುಕೊಳ್ಳುವ ಪ್ರಯತ್ನಗಳನ್ನು ನನ್ನ ಸರ್ಕಾರವು ಮುಂದುವರಿಸುತ್ತದೆ. ನ್ಯಾಯಬೆಲೆ ಅಂಗಡಿಗಳನ್ನು ವಿಕೇಂದ್ರೀಕರಿಸುವುದು ಮತ್ತು ಹೆಚ್ಚಿನ ವ್ಯಾಪ್ತಿಯ ಅಗತ್ಯವಸ್ತುಗಳನ್ನು ತೃಪ್ತಿದಾಯಕ ಜೊತೆಗೆ ಅರ್ಹ ಫಲಾನುಭವಿಗಳನ್ನು ತೆಗೆದು ಹಾಕುವ ಹಾಗೂ ಪಟ್ಟಿಯಲ್ಲಿ ಸೇರಿಲ್ಲದ ಅರ್ಹ ಫಲಾನುಭವಿಗಳನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸುವ ಸಲುವಾಗಿ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವ ಕಾರ್ಯಯೋಜನೆಯಡಿ ನೀಡಲಾದ ಹಸಿರು ಕಾರ್ಡಿನ ಸೌಲಭ್ಯದ ಬಗ್ಗೆ ಕೂಲಂಕುಷವಾದ ಸಮೀಕ್ಷೆಯನ್ನು ಕೈಗೊಳ್ಳಲಾಗುವುದು. ನನ್ನ ಸರ್ಕಾರವು, ಪ್ರತಿಯೊಂದು ಜಿಲ್ಲೆಗಳಲ್ಲಿ ಗ್ರಾಹಕರ ಸಂರಕ್ಷಣಾ ಮಂಡಲಿಯನ್ನು ಸ್ಥಾಪಿಸಲಿದೆ. ಇದು ಜಿಲ್ಲೆಯ ಮಟ್ಟದಲ್ಲೇ ಗ್ರಾಹಕರಿಗೆ ಪರಿಹಾರವನ್ನು ಒದಗಿಸುವುದು.

೨೮. ಸಾರಿಗೆ ಇಲಾಖೆಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಹಂತ ಹಂತವಾಗಿ ಕಂಪ್ಯೂಟರ್‌ಗೆ ಅಳವಡಿಸಲು ಉದ್ದೇಶಿಸಲಾಗಿದೆ. ಭಾರತದಲ್ಲಿಯೇ ಪ್ರಪ್ರಥಮ ಬಾರಿಗೆ ಬೆಂಗಳೂರು ನಗರದಲ್ಲಿನ ಪ್ರಾದೇಶಿಕ ಸಾರಿಗೆ ಕಛೇರಿಯೊಂದರಲ್ಲಿ ಕಲಿಕೆ ಲೈಸೆನ್ಸ್ ಪರೀಕ್ಷೆಯನ್ನು ೧ನೇ ಜನವರಿ ೧೯೯೦ರಂದು ಕಂಪ್ಯೂಟರ್ ಮೂಲಕ ನಡೆಯಿಸಲಾಯಿತೆಂಬುದನ್ನು ಮಾನ್ಯ ಸದಸ್ಯರುಗಳಿಗೆ ಸಂತೋಷವನ್ನುಂಟು ಮಾಡುವ ವಿಷಯವಾಗಿದೆ. ಇಲಾಖೆಯ ಕಾರ್ಯದಲ್ಲಿನ ತೊಡಕ್ಕುಗಳನ್ನು ಗುರುತಿಸಲು ಸಾರಿಗೆ ಅದಾಲತ್‌ಗಳನ್ನು ಪ್ರಾರಂಭಿಸಲಾಗಿದೆ. ಇದೇ ಮೊದಲ ಬಾರಿಗೆ ಸಾರಿಗೆ ಬೇಡಿಕೆ ಸಮೀಕ್ಷೆಯನ್ನು ಪ್ರಾರಂಭಿಸಲಾಗಿದ್ದು ರಾಜ್ಯ ಮಟ್ಟದಿಂದ ಗ್ರಾಮೀಣ ಮಟ್ಟದವರೆಗೆ ವಿವಿಧ ಸಾರಿಗೆ ಸೇವೆಗಳಿಗೆ ಇರುವ ಬೇಡಿಕೆಯ ಸ್ವರೂಪವನ್ನು ಅಧ್ಯಯನ ಮಾಡಲಾಗಿದೆ. ಈ ಸಮೀಕ್ಷೆಯ ಪರಿಣಾಮವಾಗಿ ಬರುವ ವರ್ಷಗಳಲ್ಲಿ ಸರ್ಕಾರವು ತನ್ನ ಕಾರ್ಯನೀತಿ ಕ್ರಮಗಳನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.

೨೯. ಮಲ್ಪೆ ಬಿನಾಂಗಾರಿಕೆ ಬಂದರಿನ ಪ್ರಥಮ ಹಂತ ಇದೀಗ ಪೂರ್ಣಗೊಂಡಿದೆ. ಭಾರತ ಸರ್ಕಾರದಿಂದ ಅನುಮೊದನೆಯನ್ನು ಪಡೆದುಕೊಂಡ ನಂತರ, ಎರಡನೇ ಹಂತವನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಕಾರವಾರ ಜಿಲ್ಲೆಯ ತದ್ರಿಯಲ್ಲಿ ಕೈಗೊಳ್ಳಲಾಗಿರುವ ಇಂಡೋ-ಡ್ಯಾನಿಷ್ ಸಮಗ್ರ ಮೀನುಗಾರಿಕೆ ಯೋಜನೆಯು ಈ ವರ್ಷದ ಅಕ್ಟೋಬರ್‌ನಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ಯೋಜನೆಯ ಎರಡನೇ ಹಂತಕ್ಕೆ ಭಾರತ ಸರ್ಕಾರದ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ. ಮೀನಿನ ಕ್ರಯವಿಕ್ರಯಕ್ಕೆ ಸೂಕ್ತ ಸೌಲಭ್ಯಗಳನ್ನು ಒದಗಿಸಲು ರಾಜ್ಯದಲ್ಲಿನ ಎಲ್ಲಾ ಸ್ಥಳೀಯ ಸಂಸ್ಥೆಗಳನ್ನು ಕೋರಲಾಗಿದೆ. ಮತ್ಸ್ಯ ಕೃಷಿಗೆ ಒತ್ತು ಕೊಡುವುದರ ಜೊತೆಗೇ ನನ್ನ ಸರ್ಕಾರ ಮೀನುಗಾರರ ಬಗ್ಗೆ ವಿಶೇಷ ಗಮನ ನೀಡುವುದು. ದಾರಿದ್ರ್ಯ ರೇಖೆಗಿಂತ ಕೆಳಗಿರುವ ಮೀನುಗಾರರಿಗೆ ರಾಷ್ಟ್ರೀಯ ಕಲ್ಯಾಣ ಯೋಜನೆಯ ಮೇರೆಗೆ ಮನೆಗಳನ್ನು ಕಟ್ಟಿಕೊಡಲಾಗುವುದು. ಕಡಲ ಮೀನುಗಾರಿಕೆ ಮೀನುಗಾರಿಕೆ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸಲುವಾಗಿ ತೀವ್ರ ಪಹರೆ ನಡೆಸಲು ವಿಶೇಷ ವೇಗದ ದೋಣಿಗಳನ್ನು ಪಡೆದುಕೊಳ್ಳಬೇಕಾಗಿದೆ.

೩೦. ವಿಶ್ವಬ್ಯಾಂಕಿನ ಸಾಗರೋತ್ತರ ಅಭಿವೃದ್ಧಿ ನಿರ್ವಹಣಾ ಮಂಡಲಿಯಿಂದ ನೆರವು ಪಡೆದ ಸಾಮಾಜಿಕ ಅರಣ್ಯ ಯೋಜನೆಯನ್ನು ಮತ್ತೊಂದು ವರ್ಷ ಮುಂದುವರಿಸಲಾಗುತ್ತಿದೆ. ಪಶ್ಚಿಮ ಘಟ್ಟಗಳಲ್ಲಿನ ಅರಣ್ಯಗಳ ಸಮಗ್ರ ಅಭಿವೃದ್ಧಿಗಾಗಿ, ಐದು ವರ್ಷಗಳ ಅವಧಿಯ ಪ್ರಮುಖ ಯೋಜನೆ ಒಂದನ್ನು ರೂಪಿಸಲಾಗಿದೆ. ಈ ಯೋಜನೆಯ ಬಗ್ಗೆ ಆಸಕ್ತಿ ಹೊಂದಿರುವ, ಗ್ರೇಟ್ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ನಿರ್ವಹಣಾ ಮಂಡಲಿಯಿಂದ ಭಾರತ ಸರ್ಕಾರವು ಈ ಯೋಜನೆಗೆ ವಿದೇಶಿ ನೆರವು ಪಡೆದುಕೊಳ್ಳುವುದೆಂಬ ದೃಢ ನಂಬಿಕೆ ನನಗಿದೆ.

೩೧. ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿಗಾಗಿ ಒಂದು ಬೃಹತ್ ಯೋಜನೆಯನ್ನು ರೂಪಿಸಲಾಗಿದ್ದು, ನನ್ನ ಸರ್ಕಾರವು ಅದನ್ನು ವಿದೇಶಿ ನೆರವಿನೊಂದಿಗೆ ಕಾರ್ಯರೂಪಕ್ಕೆ ತರಲು ಉದ್ದೇಶಿಸಿದೆ. ಕರ್ನಾಟಕದಲ್ಲಿನ ಕೋಳಿ ಸಾಕಣೆಕೆದಾರರು ತಮ್ಮ ಉತ್ಪನಗಳನ್ನು ಮಾರುವುದರಲ್ಲಿ ತೊಂದರೆಯನ್ನೆದುರಿಸುತ್ತಿದ್ದಾರೆ. ಕೋಳಿ ಸಾಕಣೆದಾರರು ಹಾಗೂ ಕೋಳಿ ಉತ್ಪನ್ನಗಳ ಗ್ರಾಹಕರು ಇಬ್ಬರಿಗೂ ನೆರವಾಗಲು ನನ್ನ ಸರ್ಕಾರವು ಕೋಳಿ ಕ್ರಯ ವಿಕ್ರಯ ನಿಗಮವನ್ನು ಸ್ಥಾಪಿಸುವ ವಿಷಯವನ್ನು ತೀವ್ರವಾಗಿ ಪರಿಶೀಲಿಸುತ್ತಿದೆ.

೩೨. ಈ ವರ್ಷ ಆಹಾರ ಉತ್ಪಾದನೆಗಾಗಿ ಹಾಕಿಕೊಂಡಿದ್ದ ಗುರಿಯನ್ನು ಹಾಗೂ ಎಣ್ಣೆ ಬೀಜಗಳು, ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಗಾಗಿ ಹಾಕಿಕೊಂಡಿದ್ದ ಗುರಿಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಇದಕ್ಕೆ ಅನಿಶ್ಚಿತ ಮಳೆಯೇ ಬಹುಮಟ್ಟಿಗೆ ಕಾರಣ. ಖುಷ್ಕಿ ಭೂಮಿ ಅಭಿವೃದ್ಧಿ ಮಂಡಲಿಗಳ ಆಶ್ರಯದಲ್ಲಿ ಜಲವಿಭಾಜಕ ಅಭಿವೃದ್ಧಿ ಕಾರ್ಯಕ್ರಮವನ್ನು ಮತ್ತು ಕರ್ನಾಟಕ ಎಣ್ಣೆ ಬೀಜಗಳ ನಿಗಮದ ಮೂಲಕ ಎಣ್ಣೆ ಬೀಜಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಮುಂಬರುವ ವರ್ಷಗಳಲ್ಲೂ ಮುಂದುವರಿಸಲಾಗುವುದು. ಕೃಷಿ ಅಭಿವೃದ್ಧಿ ಕ್ಷೇತ್ರದಲ್ಲಿ ದುರ್ಬಲ ವರ್ಗಗಳಿಗಾಗಿ ರೂಪಿಸಲಾಗಿರುವ ವಿಶೇಷ ಕಾರ್ಯಕ್ರಮದ ಅಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಸಾಧಕರಗಳ ವಿತರಣೆಗೆ ಒತ್ತು ನೀಡುವುದನ್ನು ಮುಂದುವರಿಸಲಾಗುವುದು. ಎಣ್ಣೆ ಬೀಜಗಳ ಉತ್ಪಾದನೆಯ ಕೊರತೆಯನ್ನು ನೀಗಿಸುವ ಸಲುವಾಗಿ ಎಣ್ಣೆ ದೊರೆಯುವ ತಾಳೆಯ ಕೃಷಿಗಾಗಿ ಪ್ರಯೋಗಿಕ ಯೋಜನೆಯನ್ನು ಭದ್ರಾ ಅಚ್ಚು ಕಟ್ಟು ಪ್ರದೇಶದಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಯ ಫಲಿತಾಂಶಗಳ ಆಧಾರದ ಮೇಲೆ ತುಂಗಭದ್ರಾ ಯೋಜನೆ ಮತ್ತು ಕಾವೇರಿ ಜಲಾನಯನ ಯೋಜನೆಯ ಅಚ್ಚು ಕಟ್ಟು ಪ್ರದೇಶಗಳಲ್ಲಿರುವ ಇನ್ನಷ್ಟು ಪ್ರದೇಶಗಳನ್ನು ಎಣ್ಣೆ ದೊರೆಯುವ ತಾಳೆಯ ಕೃಷಿಯ ವ್ಯಾಪ್ತಿಗೆ ಒಳಪಡಿಸಲು ಉದ್ದೇಶಿಸಲಾಗಿದೆ. ಕರ್ನಾಟಕದಲ್ಲಿ ತೋಟಗಾರಿಕೆಗೆ ಹೇರಳ ಅವಕಾಶವಿದೆ. ತತ್ಪರಿಣಾಮವಾಗಿ, ತೋಟಗಾರಿಕೆ ವ್ಯಾಪ್ತಿಗೆ ಹೊಸ ಪ್ರದೇಶಗಳನ್ನು ಒಳಪಡಿಸಲು ವಿಶೇಷ ಪ್ರಯತ್ನವನ್ನು ಮಾಡಲಾಗುವುದು ಮತ್ತು ತೋಟಗಾರಿಕೆ ಹೊಸ ತಳಿಗಳನ್ನು ಸಹ ಪರಿಚಯಿಸಲಾಗುವುದು.

೩೩. ಕೃಷಿಕರಿಗೆ ಲಾಭದಾಯಕ ಬೆಲೆಗಳು ದೊರೆಯುವಂತೆ ಮಾಡುವ ಸಲುವಾಗಿ ನನ್ನ ಸರ್ಕಾರವು ಅವಶ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಶಕ್ತಿಮೀರಿ ಪ್ರಯತ್ನಿಸುತ್ತದೆ. ನನ್ನ ಸರ್ಕಾರ ರಾಜ್ಯದ ರೈತರ ಹಿತಾಶಕ್ತಿಗಳನ್ನು ಸದಾ ಗಮನದಲ್ಲಿಟ್ಟುಕೊಂಡು, ಅವರಿಗೆ ಸಾಧ್ಯವಾದ ಎಲ್ಲ ಸಹಾಯವನ್ನು ಒದಗಿಸುತ್ತದೆ ಎಂದು ಹೇಳಬೇಕಾಗಿಲ್ಲ.

೩೪. ಕರ್ನಾಟಕದಲ್ಲಿ ಅತಿಶಯವಾದ ಪ್ರವಾಸೀ ಸ್ಥಳಗಳಿರುವುದೂ ಮಾನ್ಯ ಸದಸ್ಯರಿಗೆ ಗೊತ್ತೇ ಇದೆ. ೧೯೯೦-೯೧ನೇ ವರ್ಷವನ್ನು ''ಭಾರತ ದರ್ಶನ'' ವರ್ಷವನ್ನಾಗಿ ಆಚರಿಸಲಾಗುತ್ತದೆ. ಈ ಪುಣ್ಯ ಸಜ್ಜಾಗಿರಲು, ಪ್ರವಾಸಿಗಳಿಗೆ ಆಹಾರ ಒದಗಿಸುವ ದೃಷ್ಟಿಯಿಂದ, ಮೂಲಭೂತ ಸೌಲಭ್ಯಗಳನ್ನು ಉತ್ತಮ ಪಡಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಸಮಗ್ರ ಪ್ರವಾಸೀ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸಲಾಗಿದೆ. ನನ್ನ ಸರ್ಕಾರವು ಈ ಯೋಜನೆಯನ್ನು ವಿಶ್ವಸಾಗರೋತ್ತರ ಸಹಕಾರಿ ಆರ್ಥಿಕ ನಿಧಿಯಿಂದ ವಿದೇಶಿ ನೆರವನ್ನು ಪಡೆದುಕೊಂಡು ಕಾರ್ಯರೂಪಕ್ಕೆ ತರುವ ನಿರೀಕ್ಷೆ ಇದೆ. ಮುಂದಿನ ಹಣಕಾಸು ವರ್ಷದಲ್ಲಿ ಪ್ರಾರಂಭವಾಗಲಿರುವ ಈ ಯೋಜನೆಯು ಕರ್ನಾಟಕಕ್ಕೆ ಪ್ರವಾಸಿ ಭೂಪಟದಲ್ಲಿ ಹೆಮ್ಮೆಯ ಸ್ಥಾನವನ್ನು ನೀಡುತ್ತದೆ.

೩೫. ಮಾನ್ಯ ಸದಸ್ಯರೇ, ವಿಶ್ವ ಬ್ಯಾಂಕಿನ ನೆರವಿನಿಂದ ತಾಂತ್ರಿಕ ಶಿಕ್ಷಣವನ್ನು ಬಲಪಡಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಭಾರತ ಸರ್ಕಾರವು ಗುರುತಿಸಿರುವ ಮೂರು ರಾಜ್ಯಗಳ ಪೈಕಿ ಕರ್ನಾಟಕವು ಒಂದು ಎನ್ನುವುದು ನಿಮಗೆ ಸಂತೋಷ ತರುವ ವಿಷಯವಾಗಿದೆ. ಮಾನವ ಶಕ್ತಿ ವಿಕಸನ, ಗುಣಮಟ್ಟ ಸುಧಾರಣೆ ಮತ್ತು ದಕ್ಷತೆಯ ಸುಧಾರಣೆ ಈ ಮೂರು ವಿವಿಧ ಹಂತಗಳ ಅಡಿಯಲ್ಲಿ ತಾಂತ್ರಿಕ ಶಿಕ್ಷಣವನ್ನು ಉನ್ನತ ಮಟ್ಟಕ್ಕೇರಿಸಲು ಉದ್ದೇಶಿಸಲಾಗಿದೆ. ತತ್ಪರಿ

ಣಾಮವಾಗಿ ಈ ವರ್ಷದ ತರುವಾಯ, ಹೊಸ ಹೊಸ ವ್ಯಾಸಂಗ ಕ್ರಮಗಳು, ಮುಂದುವರಿಯುತ್ತಿರುವ ಶಿಕ್ಷಣ ಕಾರ್ಯಕ್ರಮಗಳು, ಮಹಿಳೆಯರಿಗೆ ಮತ್ತು ದೈಹಿಕ ಅಂಗವಿಕಲರಿಗಾಗಿ ವಿಶೇಷ ಕಾರ್ಯಕ್ರಮಗಳು ಹಾಗೂ ಪ್ರಯೋಗಾಲಯಗಳು ಮತ್ತು ಸಾಧನ ಸಲಕರಣೆಗಳ ಆಧುನೀಕರಣ ಇವೇ ಮುಂತಾದುವುಗಳಿಂದ ತಾಂತ್ರಿಕ ಶಿಕ್ಷಣದಲ್ಲಿ ಗಣನೀಯ ಸುಧಾರಣೆಯಾಗಲಿದೆ.

೩೬. ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣಕ್ಕೆ ಒದಗಿಸಲಾದ ಸೌಲಭ್ಯಗಳು ಏನೇನೂ ಸಾಲದು. ಆದುದರಿಂದ ನನ್ನ ಸರ್ಕಾರವು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸೌಲಭ್ಯಗಳನ್ನು ಉತ್ತಮ ಪಡಿಸಲು ಹೆಚ್ಚಿನ ಆದ್ಯತೆ ನೀಡುವುದು. ಈ ನಿಟ್ಟಿನಲ್ಲಿ ಈಗ ಇರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳ ದುರಸ್ತಿ, ಹೊಸ ಶಾಲಾ ಕಟ್ಟಡಗಳ ನಿರ್ಮಾಣ ಹಾಗೂ ಶಾಲೆಗಳಿಗೆ ಅವಶ್ಯಕ ಶಿಕ್ಷಣ ಸಾಧನಗಳು ಮತ್ತು ಸಲಕರಣೆಗಳನ್ನು ಒದಗಿಸುವುದು—ಇವುಗಳಿಗೆ ಒತ್ತು ನೀಡಲಾಗುವುದು. ಆದಷ್ಟು ಬೇಗನೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಉಪಾಧ್ಯಾಯರುಗಳ ನೇಮಕಾತಿಯನ್ನು ಮಾಡಲಾಗುವುದು.

೩೭. ನನ್ನ ಸರ್ಕಾರವು, ಸಾಂಖ್ಯಿಕ ಹಣಕಾಸು ನೆರವಿನೊಂದಿಗೆ ರಾಜ್ಯದಲ್ಲಿನ ೨೭ ಪಟ್ಟಣಗಳು ಹಾಗೂ ನಗರಗಳಿಗೆ ನೀರು ಪೂರೈಕೆಯನ್ನು ಹೆಚ್ಚಿಸಲು ಯೋಜನೆಗಳನ್ನು ರೂಪಿಸಿದೆಯೆಂಬುದು ಮಾನ್ಯ ಸದಸ್ಯರಿಗೆ ಸಂತೋಷ ತರುವ ವಿಷಯವಾಗಿದೆ. ನೀರು ಪೂರೈಕೆ ಕಡಿಮೆ ಇರುವ ಉಳಿದ ಪಟ್ಟಣಗಳು ಹಾಗೂ ನಗರಗಳಲ್ಲಿ ಚಾಲ್ತಿ ವರ್ಷದಲ್ಲಿ ಇದೇ ರೀತಿಯ ಯೋಜನೆಗಳನ್ನು ರೂಪಿಸಲಾಗುವುದು. ಕಳೆದ ಕೆಲವು ವರ್ಷಗಳಿಂದ ಗ್ರಾಮಗಳಲ್ಲಿ ನೈರ್ಮಲ್ಯ ಪಾಯಿಖಾನೆಗಳ ನಿರ್ಮಾಣ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಆದಾಗ್ಯೂ ಈ ಯೋಜನೆಯಿಂದ ಎದ್ದು ಕಾಣುವಂಥ ಯಾವುದೇ ಸುಧಾರಣೆ ಕಂಡು ಬಂದಿಲ್ಲ. ಆದುದರಿಂದ ನನ್ನ ಸರ್ಕಾರವು 'ನಿರ್ಮಲ ಗ್ರಾಮ ಯೋಜನೆ' ಎಂಬ ಒಂದು ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸುತ್ತಿದೆ. ಈ ಕಾರ್ಯಕ್ರಮದ ಮೇರೆಗೆ ನೈರ್ಮಲ್ಯ ಪಾಯಿಖಾನೆಗಳ ನಿರ್ಮಾಣಕ್ಕಾಗಿ ಗ್ರಾಮೀಣ ಕುಟುಂಬಗಳಿಗೆ ಸಾಮಗ್ರಿಗಳು ಹಾಗೂ ತಾಂತ್ರಿಕ ಸಹಾಯದ ರೂಪದಲ್ಲಿ ಸಹಾಯಧನ ನೀಡಲಾಗುವುದು. ಪ್ರತಿ ವರ್ಷ ಒಂದು ಲಕ್ಷ ನೈರ್ಮಲ್ಯ ಪಾಯಿಖಾನೆಗಳನ್ನು ಕಟ್ಟಲು ಉದ್ದೇಶಿಸಲಾಗಿದೆ. ಇದರಿಂದಾಗಿ ಇಂದಿನಿಂದ ಕೆಲವೇ ವರ್ಷಗಳೊಳಗಾಗಿ ಕರ್ನಾಟಕದಲ್ಲಿನ ಗ್ರಾಮಗಳು ಈಗಿರುವುದಕ್ಕಿಂತ ಹೆಚ್ಚು ಸ್ವಚ್ಛವಾಗಿರುವಂತೆ ಮಾಡಲು ಸಾಧ್ಯವಾಗುತ್ತದೆ.

೩೮. ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿಯು ನನ್ನ ಸರ್ಕಾರದ ತೀವ್ರಗಮನ ಸೆಳೆದಿದೆ. ಭಾರತ ಸರ್ಕಾರ ಹಾಗೂ ಯೋಜನಾ ಆಯೋಗದೊಂದಿಗೆ ಸಮಾಲೋಚಿಸಿದ ನಂತರ ನನ್ನ ಸರ್ಕಾರವು, ಅತ್ಯಾವಶ್ಯಕ ಸ್ವರೂಪದ ವಿವಿಧ ಅಭಿವೃದ್ಧಿ ಯೋಜನೆಗಳಿಗಾಗಿ ಈ ಪ್ರದೇಶಕ್ಕೆ ಸಾಕಷ್ಟು ಹಣವನ್ನು ಹಂಚಿಕೆ ಮಾಡಲು ಉದ್ದೇಶಿಸಿದೆ. ಈ ಕಾರ್ಯಕ್ರಮದ ಜಾರಿಯನ್ನು ಮುಂದಿನ ಆರ್ಥಿಕ ವರ್ಷದ ಅವಧಿಯಲ್ಲಿಯೇ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ನನ್ನ ಸರ್ಕಾರವು ಗಡಿ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡಲು ಉದ್ದೇಶಿಸಿದೆ.

೩೯. ಜನತೆ ಆಡಳಿತಕ್ಕೆ ಸ್ಪಂದಿಸುವಂತಾಗಬೇಕಾದರೆ, ಜನಸಾಮಾನ್ಯರಿಗೆ ತಿಳಿಯುವ ಭಾಷೆಯಲ್ಲಿಯೇ ರಾಜ್ಯದ ಆಡಳಿತದ ವ್ಯವಹಾರ ನಡೆಯಬೇಕು ಎನ್ನುವ ಅಂಶದಲ್ಲಿ ನನ್ನ ಸರ್ಕಾರ ನಂಬಿಕೆಯಿಟ್ಟಿದೆ. ಆದ ಕಾರಣ, ಎಲ್ಲಾ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರಿಗೆ ತೀವ್ರ ತರಬೇತಿ ಕಾರ್ಯಕ್ರಮಗಳು ಮತ್ತು ಭಾಷಾ ತರಗತಿಗಳನ್ನು ನಡೆಸಲಾಗುವುದು. ನಮ್ಮ ರಾಜ್ಯದ ಜನತೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಪ್ರಗತಿಗೆ, ಕನ್ನಡ ಭಾಷೆ ಮತ್ತು ಸಾಹಿತ್ಯಾಭಿವೃದ್ಧಿ ಅತ್ಯವಶ್ಯ. ಕನ್ನಡ ಭಾಷೆಯಲ್ಲಿ ಪ್ರಕಟಣೆಗಳನ್ನು ಪ್ರೋತ್ಸಾಹಿಸಲು ಮತ್ತು ಭೌತಿಕ ಹಾಗೂ ಸಾಮಾಜಿಕ ವಿಜ್ಞಾನ, ಲಲಿತ ಕಲೆಗಳು ಮತ್ತು ಮಾನವಿಕ ಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿನ ಆಯ್ದ ಕೃತಿಗಳನ್ನು ಭಾಷಾಂತರಿಸಲು ನನ್ನ ಸರ್ಕಾರ ಹೊಸ ಯೋಜನೆಯನ್ನು ಜಾರಿಗೆ ತರಲಿದೆ. ಕನ್ನಡದಲ್ಲಿ ಕಚೇರಿ ಕಾರ್ಯ ಸಾಮಗ್ರಿಯನ್ನು ವಿನ್ಯಾಸಗೊಳಿಸಲು ಮತ್ತು ಸಿದ್ಧಪಡಿಸಲು ಎಲ್ಲಾ ಬಗೆಯ ಪ್ರೋತ್ಸಾಹ ಕೊಡಲಾಗುವುದು. ಪ್ರಸಕ್ತ ವರ್ಷ ಕನ್ನಡ ಭಾಷೆಯಲ್ಲಿ ಮುದ್ರಣಕ್ಕೆ ಹೊಸ ಬಗೆಯ ಅಕ್ಷರ ಜೋಡಣೆ ಪದ್ಧತಿಯನ್ನು ಜಾರಿಗೆ ತರುವ ಸಲುವಾಗಿ ಯೋಜನೆಯೊಂದನ್ನು ಕೈಗೊಳ್ಳಲಾಗುವುದು. ನನ್ನ ಸರ್ಕಾರ, ಮುಂದಿನ ಶೈಕ್ಷಣಿಕ ವರ್ಷದಿಂದ ಕನ್ನಡ ವಿಶ್ವವಿದ್ಯಾಲಯವನ್ನು ಆರಂಭಿಸುವುದು ಎಂಬುದು ಮಾನ್ಯ ಸದಸ್ಯರಿಗೆ ಸಂತೋಷ ತರುವ ವಿಷಯವಾಗಿದೆ.

೪೦. ನಮ್ಮ ಗ್ರಾಮೀಣ ಪ್ರದೇಶಗಳ ಯುವಜನರಲ್ಲಿ ಬಹಳಷ್ಟು ಪ್ರತಿಭೆ ಇದೆ. ಈ ಪ್ರತಿಭೆಗೆ ಪ್ರೋತ್ಸಾಹ ನೀಡುವ ಸಲುವಾಗಿ ತಾಲ್ಲೂಕು ಮಟ್ಟದಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ಅಗತ್ಯವಾದ

ಮೂಲಭೂತ ಸೌಲಭ್ಯಗಳನ್ನು VIIನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸೃಜಿಸಲಾಗುವುದು ಮೈಸೂರಿನ ಕ್ರೀಡಾ ಸಮುಚ್ಚಯದ ಜೊತೆಗೆ ಇನ್ನೂ ಮೂರು ಕ್ರೀಡಾ ಸಮುಚ್ಚಯಗಳನ್ನು ನಿರ್ಮಿಸಲಾಗುವುದು. ಈ ವರ್ಷ ಇತ್ತೀಚೆಗೆ ಮುಕ್ತಾಯಗೊಂಡ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರಧಾನ ಮಂತ್ರಿಗಳ ಗಣರಾಜ್ಯದಿನ ಲಾಂಛನವನ್ನು ಕರ್ನಾಟಕದ ಎನ್‌ಸಿಸಿ ಕೆಡೆಟ್‌ಗಳು ಪಡೆದುಕೊಂಡಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಸಂತೋಷವನ್ನುಂಟು ಮಾಡುವ ವಿಷಯವಾಗಿದೆ.

೪೧. ಮಾನ್ಯ ಸದಸ್ಯರೇ, ನಾನು ನನ್ನ ಭಾಷಣವನ್ನು ಈಗ ಮುಗಿಸಲಿದ್ದೇನೆ. ನಿಮ್ಮ ಮುಂದೆ ಕಾರ್ಯಕ್ರಮದ ದೊಡ್ಡ ಪಟ್ಟಿಯೇ ಇದೆ. ಶಾಸನ ಸಭೆಯ ಕಾರ್ಯಕಲಾಪಗಳೇ ಅಲ್ಲದೆ, ಈ ವರ್ಷದ ಬಜೆಟನ್ನು ಸಹ ಪರಿಶೀಲಿಸಲಿದ್ದೀರಿ. ನೀವು ಕರ್ನಾಟಕ ವಿಧಾನ ಮಂಡಲದ ಅತ್ಯುನ್ನತ ಪರಂಪರೆಯನ್ನು ಕಾಯ್ದುಕೊಂಡು ಬರುತ್ತೀರೆಂಬ ಭರವಸೆ ನನಗಿದೆ. ಪ್ರೌಢ ಚಿಂತನೆ ಮತ್ತು ಸೂಕ್ಷ್ಮ ವಿವೇಚನೆ ತಮ್ಮ ಚರ್ಚೆಗಳಲ್ಲಿ ಮೂಡಿ ಬರಲಿ.

ತಮ್ಮ ಪ್ರಯತ್ನಗಳಲ್ಲಿ ತಮಗೆ ಪೂರ್ಣ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ.

೧೧.೩೦ ಎ. ಎಂ.

(The House adjourned as 11·35 a.m. to re-assemble after fifteen minutes.)

(ಸದನವು ೧೨-೧೫ ಗಂಟೆಗೆ ಪುನಃ ಸಮಾವೇತಗೊಂಡಿತು)

ಅಧ್ಯಕ್ಷರು.—(ಶ್ರೀ ಎಸ್. ಎಂ. ಕೃಷ್ಣ) ಅವರ ಪೀಠದಲ್ಲಿದ್ದರು.

೨. ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

೧) ಪ್ರೊ. ಎಂ. ಡಿ. ನಂಜುಂಡಸ್ವಾಮಿ.

೨) ಶ್ರೀ ರಾಮಲಿಂಗರೆಡ್ಡಿ.

೩) ಶ್ರೀ ಕೆ. ಹೆಚ್. ಕುರುಡಿಗಿ.

(ಮೇಲ್ಕಾಣಿಸಿದ ಸದಸ್ಯರು ಪ್ರಮಾಣವಚನ ಸ್ವೀಕರಿಸಿದರು)

ಸಂತಾಪ ಸೂಚಕ ನಿರ್ಣಯ

† ಅಧ್ಯಕ್ಷರು.—ವಿಧಾನ ಸಭೆಯ ಮಾಜಿ ಸದಸ್ಯರೂ ವಿದ್ಯಾ ಸಚಿವರೂ ಆಗಿದ್ದ ಶ್ರೀ ಕೆ.ವಿ. ಶಂಕರ ಗೌಡ ಅವರು ಇದೇ ಮಾರ್ಚ್ ೪ ರಂದು ಸಧನರಾದ ಸುದ್ದಿಯನ್ನು ಸಭೆಯ ಗಮನಕ್ಕೆ ಅತ್ಯಂತ ವಿಷಾದದಿಂದ ತರುತ್ತಿದ್ದೇನೆ. ಶ್ರೀಯುತ ಶಂಕರಗೌಡರು ೧೯೪೯ ರಿಂದ ೧೯೫೦ರ ವರೆಗೆ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ, ೧೯೫೦ ರಿಂದ ೫೩ರ ವರೆಗೆ ಮೊದಲನೇಯ ವಿಧಾನ ಸಭೆಯ ಸದಸ್ಯರಾಗಿ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಶ್ರೀಯುತರು ೧೯೬೬ ರಿಂದ ೧೯೭೨ ವರೆಗೆ ಮೇಲ್ಮನೆಯ ಸದಸ್ಯರಾಗಿಯೂ, ಶಿಕ್ಷಣ ಸಚಿವರಾಗಿಯೂ ರಾಜ್ಯಕ್ಕೆ ಸಲ್ಲಿಸಿದ ಸೇವೆ ಮಹತ್ತ್ವವಾದದ್ದು. ಲೇಖಕ ಸಭೆಯ ಸದಸ್ಯರೂ ಆಗಿದ್ದ ಮಾನ್ಯರು ಶಿಕ್ಷಣ ತಜ್ಞರು ಸಾಹಿತ್ಯಾಭಿಮಾನಿಗಳೂ ಆಗಿದ್ದುದೇ ಅಲ್ಲದೇ ಮಂಡ್ಯ ಜಿಲ್ಲೆಗೆ ಅವರು ಮಾಡಿರುವ ಸೇವೆ ಚಿರವಾಗಿ ನಿಲ್ಲುವಂತಾದ್ದು.

ವಿಧಾನ ಸಭೆಯ ಮಾಜಿ ಸದಸ್ಯ ಗ್ರೇಸ್ ಥಕ್ಕರ್ ಅವರು ೨೮ನೇ ಜನವರಿ ೧೯೯೦ ರಂದು ನಿಧನರಾದುದನ್ನು ಅತ್ಯಂತ ವಿಷಾದದಿಂದ ತಿಳಿಸುತ್ತೇನೆ. ಶ್ರೀಮತಿಯವರು ಎರಡನೆಯ ಹಾಗೂ ಮೂರನೇಯ ವಿಧಾನ ಸಭೆಯ ಸದಸ್ಯೆಯಾಗಿಯೂ ಉಪ ಶಿಕ್ಷಣ ಸಚಿವೆಯಾಗಿಯೂ ಮಹತ್ತರ ಸೇವೆಯನ್ನು ಸಲ್ಲಿಸಿರುತ್ತಾರೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.